ಬೆಂಗಳೂರು
ನಗರ ವಿಶ್ವವಿದ್ಯಾನಿಲಯ

BENGALURU
CITY UNIVERSITY

Office of the Registrar, Central College Campus, Dr. B.R. Ambedkar Veedhi, Bengaluru – 560 001.
PhNo.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ಎಸ್‌ವೈಎನ್/ಅಸಾಮಾನ್ಯ ಸಭೆ/077/2020-21 ದಿನಾಂಕ: 29.03.2021

ಗೆ,

ಮಾನ್ಯ ಸಿಂಡಿಕೇಟ್ ಸದಸ್ಯರು,
ಬೆಂಗಳೂರು ನಗರ ವಿಶ್ವವಿದ್ಯಾನಿಲಯ,
ಬೆಂಗಳೂರು

ಮಾನ್ಯರೆ,

**ವಿಷಯ: ದಿನಾಂಕ: 20.03.2021 ರಂದು ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳು.**

***

ದಿನಾಂಕ: 20.03.2021 ರಂದು ಪೂರ್ವಾಹ್ನ 10-30 ಗಂಟೆಗೆ ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳನ್ನು ಮಾನ್ಯ ಕುಲಪತಿಗಳು ಅನುಮೋದಿಸಿದಂತೆ, ಬೆಂಗಳೂರು ವಿಶ್ವವಿದ್ಯಾಲಯದ ಪರಿನಿಯಮಾವಳಿ 5.16 ರನ್ವಯ ಕಳುಹಿಸುತ್ತಿದ್ದೇನೆ.

ನಡಾವಳಿಗಳನ್ನು ರವಾನಿಸಿದ ದಿನಾಂಕದಿಂದ ಏಳು ದಿನಗಳೊಳಗಾಗಿ ಸಭೆಯಲ್ಲಿ ಹಾಜರಿದ್ದ ಸದಸ್ಯರು, ನಡಾವಳಿಗಳ ಬಗ್ಗೆ ಯಾವುದೇ ಆಕ್ಷೇಪಣೆಯನ್ನು ಕಳುಹಿಸದಿದ್ದಲ್ಲಿ, ಮೇಲೆ ಹೇಳಿದ ಪರಿನಿಯಮಾವಳಿಗಳ ಅನುಸಾರ ಅವುಗಳನ್ನು ಸ್ಥಿರೀಕರಿಸಲಾಗಿದೆ ಎಂದು ಪರಿಗಣಿಸಲಾಗುವುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಕುಲಸಚಿವರು

ಅಡಕ: ಮೇಲಿನಂತೆ

ಪ್ರತಿಗಳು:

1. ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – 560 001.
2. ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ), ಕರ್ನಾಟಕ ಸರ್ಕಾರ, ಬೆಂಗಳೂರು-1.
3. ಕುಲಪತಿಗಳು, ಕುಲಸಚಿವರು, ಕುಲಸಚಿವರು (ಮೌಲ್ಯಮಾಪನ), ವಿತ್ತಾಧಿಕಾರಿಗಳ ಆಪ್ತ ಕಾರ್ಯದರ್ಶಿಗಳಿಗೆ. ಬಿಸಿಯು.
4. ಕಛೇರಿ ಪ್ರತಿ / ರಕ್ಷಣಾ ಕಡತ

ಬೆಂಗಳೂರು ನಗರ ವಿಶ್ವವಿದ್ಯಾನಿಲಯ **BENGALURU CITY UNIVERSITY**

Office of the Registrar, Central College Campus, Dr. B.R. Ambedkar Veedhi, Bengaluru – 560 001.
Ph.No.080-22131385, E-mail: registrarbcu@gmail.com

ಸಂಖ್ಯೆ: ಬಿಸಿಯು/ಎಸ್‌ವೈಎನ್/ಅಸಾಮಾನ್ಯ ಸಭೆ/[illegible]/2020-21 ದಿನಾಂಕ: 29.03.2021

ದಿನಾಂಕ 20.03.2021 ರಂದು ಪೂರ್ವಾಹ್ನ 10.30 ಗಂಟೆಗೆ ಬೋರ್ಡ್‌ರೂಮ್, ಜ್ಞಾನಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು 560 001 ಇಲ್ಲಿ ಜರುಗಿದ ಸಿಂಡಿಕೇಟ್ ಅಸಾಮಾನ್ಯ ಸಭೆಯ ನಡಾವಳಿಗಳು.

**ಹಾಜರಾದ ಸದಸ್ಯರು:**

| | | |
|---|---|---|
| 1. | ಪ್ರೊ. ಎನ್. ನರಸಿಂಹಮೂರ್ತಿ<br>ಕುಲಪತಿಗಳು, | ಸಭಾಧ್ಯಕ್ಷರು |
| 2. | ಡಾ: ಹೆಚ್.ಟಿ. ಅರವಿಂದ್ | ಸದಸ್ಯರು |
| 3. | ಶ್ರೀ ಹೆಚ್.ಆರ್. ಸತೀಶ್ | ಸದಸ್ಯರು |
| 4. | ಪ್ರೊ. ಕೆ. ರಮೇಶ್ | ಸದಸ್ಯರು |
| 5. | ಡಾ. ಲಿಡಿಯಾ ಪಿ. ಸ್ಯಾಮುಯೆಲ್ | ಸದಸ್ಯರು |
| 6. | ಡಾ. ಪಿ. ವಿ. ಪದ್ಮಜಾ | ಸದಸ್ಯರು |
| 7. | ಪ್ರೊ. ಎಂ. ಚಿಕ್ಕಮುನಿಯಪ್ಪ | ಸದಸ್ಯರು |
| 8. | ಶ್ರೀ ಕರಣ್‌ಕುಮಾರ್ | ಸದಸ್ಯರು |
| 9. | ಶ್ರೀ ಹೆಚ್.ಎನ್. ಹರಿಪ್ರಸಾದ | ಸದಸ್ಯರು |
| 10. | ಶ್ರೀಮತಿ ಜ್ಯೋತಿ ವಿಜಯ್ | ಸದಸ್ಯರು |
| 11. | ಶ್ರೀ ಟಿ.ಹೆಚ್. ಶ್ರೀನಿವಾಸಯ್ಯ | ಸದಸ್ಯರು |
| 12. | ಡಾ. ಆರ್.ಕೆ. ಚಂದ್ರನಾಥ್ | ಸದಸ್ಯರು |
| 13. | ಶ್ರೀ ಥಾಮಸ್ ನೀಲಿಯಾರ | ಸದಸ್ಯರು |
| 14. | ಡಾ. ವಿ. ಗಾಯತ್ರಿ | |
| 15. | ಪ್ರೊ. ಬಿ. ರಮೇಶ್,<br>ಕುಲಸಚಿವರು (ಮೌಲ್ಯಮಾಪನ) | ಸದಸ್ಯರು |
| 16. | ಶ್ರೀಮತಿ ಆರತಿ ಆನಂದ್, ಕೆ.ಎ.ಎಸ್ (ಹಿರಿಯ ಶ್ರೇಣಿ)<br>ಕುಲಸಚಿವರು | ಸದಸ್ಯ ಕಾರ್ಯದರ್ಶಿಗಳು |

ಮಾನ್ಯ ಕುಲಸಚಿವರು ಸಭೆಗೆ ವಂದಿಸಿ, ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರನ್ನು ಸಿಂಡಿಕೇಟ್ ಸಭೆಗೆ ಆಹ್ವಾನಿಸಿದರು ಮತ್ತು ಕಾರ್ಯಸೂಚಿ ಮೇಲೆ ಚರ್ಚೆಯನ್ನು ಮಾಡಿ ಸೂಕ್ತ ನಿರ್ಣಯ ತೆಗೆದುಕೊಳ್ಳಲು ವಿನಂತಿಸಿದರು.

ಮಾನ್ಯ ಕುಲಪತಿಗಳು ಸಭೆಗೆ ವಂದಿಸಿ, ಸಮಯಕ್ಕೆ ಸರಿಯಾಗಿ ಕಾರ್ಯಸೂಚಿಯನ್ನು ತಲುಪಿಸದೆ ಇರುವುದಕ್ಕೆ ಕಾರಣ ಸಿಬ್ಬಂದಿ ಕೊರತೆ ಇದೆ ಎಂದು ತಿಳಿಸಿ ಕ್ಷಮೆಯನ್ನು ಕೋರಿದರು. ಸಿಬ್ಬಂದಿ ಕೊರತೆಯ ಕಾರಣ ಸಂಯೋಜನಾ ಆದೇಶಗಳನ್ನು ಹೊರಡಿಸುವ ಪ್ರಕ್ರಿಯೆಯೂ ಸಹ ನಿಧಾನಗತಿಯಲ್ಲಿ ಸಾಗುತ್ತಿದೆ ಎಂದು ತಿಳಿಸಿ ಕಾರ್ಯಸೂಚಿ ಬಗ್ಗೆ ಚರ್ಚಿಸಲು ತಿಳಿಸಿದರು.

ಮೊದಲಿಗೆ ಮಾನ್ಯ ಸದಸ್ಯರಾದ ಡಾ. ಆರ್. ಕೆ. ಚಂದ್ರನಾಥ್ ರವರು ಮಾತನಾಡುತ್ತ (NEP) ನ್ಯಾಷನಲ್ ಎಜುಕೇಷನ್ ಪಾಲಿಸಿಗೆ ಸಂಬಂಧಿಸಿದಂತೆ 1 ದಿನದ ಕಾರ್ಯಕ್ರಮವನ್ನು ಬೆಂಗಳೂರು ನಗರ ವಿಶ್ವವಿದ್ಯಾನಿಲಯವು ಆಯೋಜಿಸಿದ್ದುದನ್ನು ಶ್ಲಾಘಿಸುತ್ತಾ, ವಿಶ್ವವಿದ್ಯಾನಿಲಯದ ಎಲ್ಲಾ ಅಧಿಕಾರಿ ವರ್ಗದವರಿಗೆ, ಅಧ್ಯಾಪಕರುಗಳಿಗೆ ಮತ್ತು ವಿದ್ಯಾರ್ಥಿಗಳಿಗೆ ತುಂಬು ಹೃದಯದ ವಂದನೆಗಳನ್ನು ಸಲ್ಲಿಸಿದರು.

ಮಾನ್ಯ ಸದಸ್ಯರಾದ ಶ್ರೀ ಕರಣ್ ಕುಮಾರ್ ರವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ಮಾನ್ಯ ಸದಸ್ಯರಾದ ಡಾ. ಆರ್. ಕೆ. ಚಂದ್ರನಾಥ್ ರವರ ಅಭಿಪ್ರಾಯವನ್ನು ಒಪ್ಪುತ್ತಾ, ಇದು ಸ್ವಾಗತರ್ಹ ಕ್ರಮ ಎಂದು ಪ್ರಶಂಸಿದರು. ಇನ್ನು ಮುಂದೆಯೂ ಸಹ ಇಂತಹ ಕಾರ್ಯಕ್ರಮಗಳನ್ನು ಹೆಚ್ಚು ಹೆಚ್ಚು ಆಯೋಜಿಸಬೇಕು ಎಂದು ಅಭಿಪ್ರಾಯಪಟ್ಟರು. ಮುಂದುವರೆದು ಕಾರ್ಯಸೂಚಿಗೆ ಸಂಬಂಧಿಸಿದಂತೆ 24 ಗಂಟೆಗಳಿಗೂ ಕಡಿಮೆ ಸಮಯದಲ್ಲಿ ಕಾರ್ಯಸೂಚಿಯನ್ನು ಇ-ಮೇಲ್ ಮುಖಾಂತರ ಕಳುಹಿಸಿಕೊಡಲಾಗಿದೆ, ಕನಿಷ್ಠ ಪಕ್ಷ 3 ಕೆಲಸದ ದಿನಗಳ ಮಟ್ಟಿನ ಸಮಯವಿರುವಂತೆಯೂ ಸಹ ಕಾರ್ಯಸೂಚಿಯನ್ನು ನೀಡಿರುವುದಿಲ್ಲ ಮತ್ತು ಸಭೆಗೆ ಹಾಜರಾಗಿರುವ ಸಮಯದಲ್ಲಿ Hard Copy ಯನ್ನು ನೀಡಲಾಗಿದೆ. ದಿನಾಂಕ 25.2.2021 ರಂದು ನಡೆದ ಅಸಾಮಾನ್ಯ ಸಿಂಡಿಕೇಟ್ ಸಭೆಯಲ್ಲಿ Campus Redevelopment ವಿಷಯಕ್ಕೆ ಸಂಬಂಧಿಸಿದಂತೆ ನಿರ್ಣಯ ತೆಗೆದುಕೊಳ್ಳಲು 10 ದಿನಗಳ ಕಾಲಾವಕಾಶವನ್ನು ಕೋರಲಾಗಿತ್ತು. ಅದರಂತೆ ಈ ಸಭೆಯಲ್ಲಿ Campus Redevelopment ವಿಷಯವನ್ನು ಹೊರತು ಪಡಿಸಿ ಬೇರೆ ವಿಷಯಗಳ ಬಗ್ಗೆ ಚರ್ಚೆಗೆ ಅವಕಾಶ ಇರುವುದಿಲ್ಲ ಮತ್ತು ಅವರು ಅದಕ್ಕೆ ಒಪ್ಪುವುದಿಲ್ಲ ಎಂದು ತಿಳಿಸದರು ಹಾಗೂ ಈ ಸಭೆಯಲ್ಲಿ, ಹಿಂದಿನ ಸಭೆಯಲ್ಲಿ ಹೇಳಿದ್ದ ಅವಲೋಕನ ಗಳನ್ನು ನಡಾವಳಿಗಳಲ್ಲಿ ಸೇರಿಸಲಾಗಿದೆಯೆ ಎಂದು ತಿಳಿಸಲು ಕೋರಿದರು.

ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ಅವರು ನಿನ್ನೆಯ ದಿನ 12.05 pm ನಿಮಿಷದ ಸುಮಾರಿನಲ್ಲಿ ಕಾರ್ಯಸೂಚಿಯನ್ನು ಇ-ಮೇಲ್ ನಲ್ಲಿ ವೀಕ್ಷಿಸಿದ ತಕ್ಷಣದಲ್ಲಿ ಇ-ಮೇಲ್ ಮುಖಾಂತರ Campus Redevelopment ಬಿಟ್ಟು ಬೇರೆ ಕಾರ್ಯಸೂಚಿಯನ್ನು ಚರ್ಚಿಸಬಾರದೆಂದು ತಿಳಿಸಿದ್ದೇನೆ ಎಂದು ಹೇಳಿದರು

ಮಾನ್ಯ ಸದಸ್ಯರಾದ ಡಾ. ಆರ್. ಕೆ. ಚಂದ್ರನಾಥ್ ರವರು ಕುಲಪತಿಗಳು ಅವಶ್ಯಕತೆ (urgent) ವಿಷಯಗಳು ತೀರ್ಮಾನ ಆಗಬೇಕಾಗಿರುವ ಸಮಯದಲ್ಲಿ ಅಸಾಮಾನ್ಯ ಸಭೆಯನ್ನು ಕರೆದು ಚರ್ಚಿಸಿ ನಿರ್ಣಯ ಪಡೆಯಬಹುದಾಗಿರುತ್ತದೆ. ಶೈಕ್ಷಣಿಕ ವಿಭಾಗದಲ್ಲಿ ಕೆಲಸ ಕಾರ್ಯಗಳು ನಿಧಾನ ಗತಿಯಲ್ಲಿ ನಡೆಯುತ್ತಿರುವುದನ್ನು ನೋಡಿರುವುದಾಗಿ ತಿಳಿಸಿದರು. ತುರ್ತು ಇರುವ ವಿಷಯಗಳನ್ನು ಈ ಸಭೆಯಲ್ಲಿ ಚರ್ಚಿಸಬಹುದು, ತುರ್ತು ಅಲ್ಲದೆ

ಇರುವ ವಿಷಯಗಳನ್ನು ಮುಂದಿನ ಸಭೆಯಲ್ಲಿ ಚರ್ಚಿಸಿ ನಿರ್ಣಯವನ್ನು ತೆಗೆದುಕೊಳ್ಳಬಹುದು ಎಂದು ಅವರು ಅಭಿಪ್ರಾಯಪಟ್ಟರು.

ಮಾನ್ಯ ಸದಸ್ಯರಾದ ಡಾ. ಶ್ರೀ ಹೆಚ್ ಎನ್ ಹರಿಪ್ರಸಾದ್ ರವರು Statutes ನಲ್ಲಿ 5.1 Meeting of the Syndicate: A meeting of the Syndicate shall ordinary be held once every month. The Vice-Chancellor in case of urgency may convene an extraordinary meeting of the Syndicate whenever he thinks it necessary. ಈ ಸಭೆಯಲ್ಲಿ ಮಂಡಿಸಲಾಗಿರುವ ತುರ್ತು ವಿಷಯಗಳನ್ನು ಒಂದಾದ ಮೇಲೆ ಒಂದರಂತೆ ಚರ್ಚಿಸಿ ನಿರ್ಣಯ ತೆಗೆದುಕೊಳ್ಳಬಹುದು, ಕುಲಪತಿಗಳಿಗೆ ಇದಕ್ಕೆ ಅಧಿಕಾರ ಇದೆ ಎಂದು ಅಭಿಪ್ರಾಯಪಟ್ಟರು.

ಮಾನ್ಯ ಸಭಾಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ದಿನಾಂಕ 31.3.2021 ರ ಒಳಗೆ ಮತ್ತೊಂದು ಸಭೆಯನ್ನು ಕರೆದು ಆ ಸಭೆಯಲ್ಲಿ ವಿಶ್ವವಿದ್ಯಾಲಯದ 2021-2022ರ ವಾರ್ಷಿಕ ಮುಂಗಡ/ಆಯವ್ಯಯವನ್ನು ಮಂಡಿಸಲಾಗುವುದು ಎಂದು ತಿಳಿಸಿದರು. ಸರ್ಕಾರದ ವಾರ್ಷಿಕ ಆಯವ್ಯಯ ಮತ್ತು ವಿಶ್ವವಿದ್ಯಾಲಯಕ್ಕೆ ನೀಡುವ ಅನುದಾನವನ್ನು ನೋಡಿಕೊಂಡು ವಿಶ್ವವಿದ್ಯಾನಿಲಯಕ್ಕೆ ಸ್ವೀಕೃತಿ ಆಗಬಹುದಾದ ಅಂದಾಜು ಹಣವನ್ನು ಲೆಕ್ಕಮಾಡಿ ಮುಂಗಡ/ಆಯವ್ಯಯವನ್ನು ಮಂಡಿಸಲಾಗಿವುದು ಎಂದು ತಿಳಿಸಿದರು. ಮುಂದುವರೆದು ಇಲ್ಲಿ ತಂದಿರುವ ವಿಷಯಗಳನ್ನು ತುರ್ತಾಗಿ ಚರ್ಚಿಸಿ ನಿರ್ಣಯಿಸ ಬೇಕಾಗಿದ್ದುದರಿಂದ ಈ ಸಭೆಯಲ್ಲಿ ಮಂಡಿಸಲಾಗಿದೆ ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ರವರು ಸಫಾಯಿ ಕರ್ಮಚಾರಿ / ಹೌಸ್ ಕೀಪಿಂಗ್ ಕಾರ್ಯ ನಿರ್ವಹಿಸುವ ನೌಕರರೇ ಬೇರೆ ಬೇರೆ ಸಫಾಯಿ ಕರ್ಮಚಾರಿ ಕೆಲಸಗಾರರನ್ನು scavenger, drainage cleaner, drainage ನಲ್ಲಿ ಇಳಿದು ಕೆಲಸ ಮಾಡುವವರು. ಕಛೇರಿಗಳಲ್ಲಿ ಕೆಲಸ ಮಾಡುವವರು House keeping ನವರು, ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕಛೇರಿಯ ವ್ಯಾಪ್ತಿಯಲ್ಲಿ ಯಾವುದೇ drainage cleaners ಇಲ್ಲ ಎಂದು ತಿಳಿಸುತ್ತಾ ವಿಶ್ವವಿದ್ಯಾನಿಲಯಕ್ಕೆ ಅವರು ಬೇಟಿ ನೀಡಿರುವುದೇ ತಪ್ಪು ಎಂದು ಅಭಿಪ್ರಾಯಪಟ್ಟರು.

ಮಾನ್ಯ ಸದಸ್ಯರುಗಳಾದ ಡಾ ಹೆಚ್. ಟಿ. ಅರವಿಂದ್ ಮತ್ತು ಶ್ರೀ. ಹೆಚ್. ಎನ್. ಹರಿಪ್ರಸಾದ ರವರು ಮಾತನಾಡುತ್ತಾ ಸಫಾಯಿ ಕರ್ಮಚಾರಿ ಆಯೋಗವು ಅರೆನ್ಯಾಯಿಕ ಸಂಸ್ಥೆಯಾಗಿದ್ದು ಈ ಸಂಸ್ಥೆಗೆ ಸ್ವಚ್ಛತಾ ಕಾರ್ಯನಿರ್ವಹಿಸುವ ಸಿಬ್ಬಂದಿ ಬಗ್ಗೆ ಕ್ರಮವಹಿಸುವ ಬಗ್ಗೆ ಅಧಿಕಾರವಿದೆ ಮತ್ತು ಈ ಆಯೋಗದ ಬಗ್ಗೆ ಲಘುವಾಗಿ ಮಾತನಾಡುವ ಅಧಿಕಾರ ನಮಗಿಲ್ಲ ಎಂದು ಅಭಿಪ್ರಾಯಪಟ್ಟರು.

ಮಾನ್ಯ ಸಭಾಧ್ಯಕ್ಷರು ಮಾತನಾಡುತ್ತಾ, ಕುಲಸಚಿವರಿಗೆ ಸಫಾಯಿ ಕರ್ಮಚಾರಿ ಆಯೋಗದವರು ಸಮನ್ಸ್ ನೀಡಿದ್ದಾರೆ ಎಂದು ತಿಳಿಸುತ್ತಾ ವಿಶ್ವವಿದ್ಯಾಲಯದಲ್ಲಿ ಸ್ವಚ್ಛತಾ ಕಾರ್ಯನಿರ್ವಹಿಸುತಿರುವ ಸಿಬ್ಬಂದಿಗೆ ನಿಯಮಾನುಸಾರ ವೇತನವನ್ನು ನೀಡಬೇಕಾಗಿರುವುದರಿಂದ ಸಭೆಯು ಸ್ವಚ್ಛತಾ ಕಾರ್ಯ ನಿರ್ವಹಣೆಗೆ ಕೇಂದ್ರ ಖರೀದಿ ಸಮಿತಿಯು ನಡಾವಳಿಗಳನ್ನು ಅನುಮೋದಿಸುವುದ ಜರೂರಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಕುಲಸಚಿವರು ಮಾತನಾಡುತ್ತಾ ನಮ್ಮ ಒಬ್ಬ ನೌಕರರು ಸಫಾಯಿ ಕರ್ಮಚಾರಿ ಕಛೇರಿಯವರಿಗೆ ಕೋವೀಡ್-19 ರ ಲಾಕ್‌ಡೌನ್ ಸಮಯದಲ್ಲಿ ಸಂಬಳ ಪಾವತಿಸದೆ ಇರುವ ಬಗ್ಗೆ ಮತ್ತು ಆ ಸಮಯದಲ್ಲಿ ಅವರಿಗೆ ಕೋವೀಡ್-19 ಪಾಸಿಟವ್ ಆಗಿದ್ದುದರಿಂದ ಕೆಲಸಕ್ಕೆ ಹಾಜರಾಗಿರುವುದಿಲ್ಲ ಎಂದು ದೂರು ನೀಡಿದ್ದರು. ಆ ದೂರಿನ ಅನ್ವಯ ಸಂಬಂಧ ಪಟ್ಟ ಅಧಿಕಾರಿಗಳು ವಿಶ್ವವಿದ್ಯಾನಿಲಯಕ್ಕೆ ಬೇಟಿ ನೀಡಿದ್ದರು. ಬೇಟಿ ನೀಡಿದ ಸಮಯದಲ್ಲಿ

ಅವರಿಗೆ ಹೌಸ್ ಕೀಪಿಂಗ್ ನೌಕರರು ನಮ್ಮ ಬಳಿ ಇರುವವರು ಮತ್ತು scavenger ಇಲ್ಲ ಅಂತ ತಿಳಿಸಲಾಗಿದೆ ಹಾಗಾದರೆ scavengers ಎಲ್ಲಿ ಎಂದು ಪ್ರಶ್ನಿಸಿ ಈಗ ಪಾವತಿಸುತ್ತಿರುವ ರೂ. 5,000/- ಸಂಬಳ ಕನಿಷ್ಠ ವೇತನಕ್ಕಿಂತ ತುಂಬಾ ಕಡಿಮೆ ಎಂದು ಆಕ್ಷೇಪಿಸಿದ್ದಾರೆ. ಈ ವಿಷಯವನ್ನು ನಿರ್ಣಯಿಸಲು ವಿಶ್ವವಿದ್ಯಾನಿಲಯವು 15 ದಿನಗಳ ಕಾಲಾವಾಕಶ ಕೇಳಿ ಕೊಂಡಿದೆ, ಇದರ ಬಗ್ಗೆ ವಿಶ್ವವಿದ್ಯಾನಿಲಯದ ಅಧಿಕಾರಿಗಳ ಜೊತೆ ಚರ್ಚಿಸಿ ನಿರ್ಣಯವನ್ನು ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು. ಮತ್ತು ಸಫಾಯಿ ಕರ್ಮಚಾರಿ ಆಯೋಗದವರಿಗೆ ಟೆಂಡರ್ ಪ್ರಕ್ರಿಯೆ ನಡೆಯುತ್ತಿರುವ ಬಗ್ಗೆ ತಿಳಿಸಿ, ಟೆಂಡರ್ ಪ್ರಕ್ರಿಯೆ ಕೊನೆಗೊಂಡ ದಿನ ಯಾವ ಸಂಬಳವು ಜಾರಿಯಲ್ಲಿರುವುದೊ ಅದನ್ನು ನೀಡಲು ಆದೇಶಿಸಲಾಗುವುದು ಎಂದು ತಿಳಿಸಲಾಗಿದೆ ಎಂದು ಹೇಳಿದರು.

ಮಾನ್ಯ ಸದಸ್ಯರಾದ ಶ್ರೀ ಕರಣ್ ಕುಮಾರ್ ಮಾತನಾಡುತ್ತ ನಾವುಗಳು ಮಾನಸಿಕವಾಗಿ ಮಾಸ್ಟರ್ ಪ್ಲಾನ್ ಬಗ್ಗೆ ಚರ್ಚಿಸಲು ಅನುವು ಮಾಡಿಕೊಂಡು ಬಂದಿರುವುದಾಗಿ ತಿಳಿಸಿ, Campus Redevelopment ವಿಷಯ ಬಿಟ್ಟು ಬೇರೆ ವಿಷಯಗಳನ್ನು ಚರ್ಚಿಸುವುದು ಬೇಡ ಮತ್ತು ಬೇರೆ ವಿಷಯಗಳು ಈಗ ಮುಖ್ಯವಲ್ಲ, ಉಳಿದ ವಿಷಯಗಳನ್ನು 2-3 ದಿನಗಳಲ್ಲಿ ಮತ್ತೊಂದು ಸಭೆಯನ್ನು ಕರೆದು, ಅದರಲ್ಲಿ ಚರ್ಚಿಸಲು ಅನುವು ಮಾಡಿಕೊಡಬೇಕೆಂದು ಕೇಳಿಕೊಂಡರು.

**ವಿಷಯ ಸಂಖ್ಯೆ-6: ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕ್ಯಾಂಪಸ್ ಪುನರಾಭಿವೃದ್ಧಿ.**

ಮಾನ್ಯ ಸಭಾಧ್ಯಕ್ಷರು ಮಾತಾನಾಡುತ್ತ, ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ ನೌಕರರ ಸಂಖ್ಯೆ ಕಡಿಮೆ ಇದೆ ಕೆಲಸದ ಒತ್ತಡ ಜಾಸ್ತಿ ಇದೆ, ಒಂದು ಸಭೆಯನ್ನು ನಡೆಸಲು 3-4 ದಿನಗಳ ಕಾಲಾವಕಾಶ ವ್ಯಯವಾಗುತ್ತದೆ. ಆದುದರಿಂದ ಬೇರೆ ಕೆಲಸಗಳು ಸ್ಥಗಿತಗೊಳ್ಳುತ್ತವೆ. ಆರ್ಥಿಕ ವರ್ಷದ ಕೊನೆಯಲ್ಲಿರುವುದರಿಂದ ಬಜೆಟ್ ಲ್ಯಾಪ್ಸ್ ಆಗುತ್ತದೆ. 45 ಲಕ್ಷರೂಗಳನ್ನು ಸರ್ಕಾರ ಪ.ಜಾ/ಪ.ಪ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಗಾಗಿ ಮಂಜೂರು ಮಾಡಿದೆ. ಆ ಹಣವನ್ನು ಉಪಯೋಗಿಸದಿದ್ದರೆ ಸರ್ಕಾರ ಆ ಅನುದಾನವನ್ನು ಹಿಂಪಡೆಯುತ್ತದೆ ಮತ್ತು ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತದೆ, ಇಲ್ಲಿ ಮಂಡಿಸಲಾಗಿರುವ ಎಲ್ಲಾ ವಿಷಯಗಳ ಬಗ್ಗೆ ಚರ್ಚಿಸಿ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ಸಭೆಯನ್ನು ಕೋರಿದರು.

ಮಾನ್ಯ ಸದಸ್ಯರಾದ ಡಾ. ಆರ್. ಕೆ. ಚಂದ್ರನಾಥ್ ರವರು ಮಾತನಾಡುತ್ತ ಬೆಳಗ್ಗೆಯಿಂದ ಸುಮಾರು 1 1/2 ಗಂಟೆಗಳ ಕಾಲ ಬೇರೆ ಬೇರೆ ವಿಷಯಗಳ ಬಗ್ಗೆಯೇ ಚರ್ಚಿಸಲಾಗುತ್ತಿದೆ ಯಾವುದೇ out come ಇಲ್ಲ ಬೇರೆ ಸದಸ್ಯರೆಲ್ಲರ ಅಭಿಪ್ರಾಯ ಕೇಳಿ ನಿರ್ಧಾರ ತೆಗೆದುಕೊಳ್ಳಲು ಸಭಾಧ್ಯಕ್ಷರಿಗೆ ಮನವಿ ಮಾಡಿದರು.

ಮಾನ್ಯ ಸಭಾಧ್ಯಕ್ಷರು ಕಾರ್ಯಸೂಚಿಯನ್ನು ಬೇಗ ಬೇಗ ಚರ್ಚಿಸಿ ನಿರ್ಣಯ ತೆಗೆದು ಕೊಳ್ಳಲು ಕೋರಿದರು ಯಾವುದೇ ವಿಷಯಕ್ಕೆ ದೀರ್ಘ ಚರ್ಚೆ ಆಗ ಬೇಕಾಗಿದಲ್ಲಿ ಅಂತಹ ವಿಷಯಗಳನ್ನು ಮುಂದಿನ ಸಭೆಯಲ್ಲಿ ಚರ್ಚಿಸಲು "defer" ಮಾಡಬಹುದು ಎಂದು ಹೇಳಿದರು.

ಮಾನ್ಯ ಸದಸ್ಯರಾದ ಶ್ರೀ ಕರಣ್ ಕುಮಾರ್ ರವರು, ಅವರು ಮಾಸ್ಟರ್ ಪ್ಲಾನ್ ಬಗ್ಗೆ ಚರ್ಚಿಸಲು ತಯಾರಾಗಿರುವುದಾಗಿ ತಿಳಿಸಿ, ಉಳಿದ ವಿಷಯಗಳ ಬಗ್ಗೆ ಚರ್ಚಿಸುವುದಾದರೆ, ತಾವು ಸಭೆಯಲ್ಲಿ ಹಾಜರಿರುವಿದಿಲ್ಲ ಎಂದು ತಿಳಿಸಿದರು. ಕಾಮಗಾರಿಯನ್ನು CPWD/PWD/RITES ಯಾರಾದರು ತೆಗೆದುಕೊಳ್ಳಲಿ, ಮೋಸ

ಆಗಬಾರದು ಕಾರ್ಯಸೂಚಿಯಲ್ಲಿ ವಿಶ್ವವಿದ್ಯಾನಿಲಯದ renovation ಕೆಲಸಕ್ಕೆ ರೂ. 25.00 ಕೋಟಿ ಹಣವನ್ನು ಸೂಚಿಸಲಾಗಿದೆ. ಸಿಂಡಿಕೇಟ್ ಸಭೆಯು ವಿಶ್ವವಿದ್ಯಾಲಯದ ಹಳೆಕಟ್ಟಡಗಳ ನವೀಕರಣ ಮತ್ತು ದುರಸ್ಥಿಗೆ ಹಣ ಬಿಡುಗಡೆ ಮಾಡಿದ ನಂತರ ಯಾವ ಯಾವ ಕಟ್ಟಡಗಳ ದುರಸ್ಥಿ ಮತ್ತು ನವೀಕರಣ ಮಾಡಲಾಗುತ್ತದೆಯೊ ಆ ಕಾರ್ಯಗಳನ್ನು ಸೂಕ್ತ ರೀತಿಯಲ್ಲಿ ಪರಿಶೀಲಿಸಬೇಕಾಗಿರುತ್ತದೆ. ಇಲ್ಲಿ ಯಾವುದೇ ರೀತಿಯ ಹಣದ ದುರುಪಯೋಗವಾಗಬಾರದು ಮತ್ತು ಕಾಮಗಾರಿ ಕಾರ್ಯಗಳನ್ನು ಸೂಕ್ತ ರೀತಿಯಲ್ಲಿ ಮೌಲ್ಯಮಾಪನ ಮಾಡಬೇಕಾಗಿದೆ ಎಂದು ತಿಳಿಸಿದರು. ಕಾಮಗಾರಿಗಳನ್ನು ವಹಿಸುವ ಸಂಸ್ಥೆ ನಿಯಮಾನುಸಾರ ನಿರ್ವಹಿಸಲು ಆಸಕ್ತರಾದರೆ ವಿಶ್ವವಿದ್ಯಾಲಯವು ಸರ್ಕಾರವು ಸೂಚಿಸುವ ಸಂಸ್ಥೆಗೆ ಕೂಡ ಈ ಕಾರ್ಯವನ್ನು ನೀಡಲು ನಿರಾಕರಿಸಬಹುದು ಎಂದು ಅಭಿಪ್ರಾಯಪಟ್ಟರು.

ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ರವರು ಮಾತನಾಡುತ್ತ ದಿನಾಂಕ 25.2.2021 ರಂದು ನಡೆದ ಸಿಂಡಿಕೇಟ್ ಸಭೆಯ ನಡಾವಳಿಗಳಿಗೆ ಕೆಲವು ಅವಲೋಕನೆಗಳನ್ನು ಇ-ಮೇಲ್ ಮುಖಾಂತರ ಕಳುಹಿಸಿಕೊಡಲಾಗಿತ್ತು ಅವುಗಳನ್ನು ನಡಾವಳಿಗಳಲ್ಲಿ ಸೇರಿಸಲಾಗಿದೆಯೆ ಇಲ್ಲವೆ ಎಂದು ಮಾನ್ಯ ಕುಲಸಚಿವರಿಗೆ ತಿಳಿಸಲು ಕೇಳಿದರು.

ಇದಕ್ಕೆ ಉತ್ತರಿಸುತ್ತಾ ಮಾನ್ಯ ಕುಲಸಚಿವರು ನಡಾವಳಿಗಳ ಮೇಲೆ ತೆಗೆದುಕೊಂಡ ಕ್ರಮಗಳನ್ನು ಸಭೆಯಲ್ಲಿ ಮಂಡಿಸುವಾಗ ಅದರ ಬಗ್ಗೆ ಚರ್ಚಿಸಿ ನಿರ್ಣಯಿಸಲಾಗುವುದು ಎಂದು ತಿಳಿಸಿದರು.

ಮಾನ್ಯ ಸಭಾಧ್ಯಕ್ಷರು ಮಾತನಾಡುತ್ತಾ ವಿಶ್ವವಿದ್ಯಾಲಯವು ಕೈಗೆತ್ತಿಕೊಂಡಿರುವ Campus Redevelopment ಕಾಮಗಾರಿಗಳನ್ನು ಸರ್ಕಾರ ಸೂಚಿಸುವ ಸಂಸ್ಥೆಗೆ ವಹಿಸಿ ಹಂತ ಹಂತವಾಗಿ ಹಣ ವರ್ಗಾವಣೆ ಮಾಡಿದ ಮೇಲೆ ಈ ಕಾಮಗಾರಿಗಳನ್ನು ಕಾಲಾನುಕಾಲಕ್ಕೆ ಪರೀಕ್ಷಿಸುವ ಮತ್ತು ಕೆಲವು ಮಾರ್ಪಾಟುಗಳನ್ನು ಸೂಚಿಸುವ ಅಧಿಕಾರ ವಿಶ್ವವಿದ್ಯಾಲಯಕ್ಕೆ ಇರುತ್ತದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಕರಣ್ ಕುಮಾರ್ ರವರು, ವಿವೇಚನೆಯಿಂದ ಅಧಿಕಾರಿಗಳು ಕೆಲಸ ನಿರ್ವಹಿಸುವುದು ಅವರ ಜವಾಬ್ದಾರಿಯಾಗಿರುತ್ತದೆ. ಎಲ್ಲವನ್ನು ಕೂಲಂಕುಷವಾಗಿ ಪರಿಶೀಲಿಸಿ ಹಣವನ್ನು ವರ್ಗಾವಣೆ ಮಾಡಬೇಕು. ಯಾವುದೇ ಕಾರಣಕ್ಕೂ ಪರಿಶೀಲಿಸಿದೆ, ಲೆಕ್ಕಾಚಾರ ಮಾಡದೆ ಹಣವನ್ನು ವರ್ಗಾಯಿಸಿದರೆ, ವಿಶ್ವವಿದ್ಯಾನಿಲಯದ ಅಧಿಕಾರಿಗಳನ್ನು ಹೊಣೆ ಮಾಡಬೇಕಾಗುವ ಸಂದರ್ಭ ಉದ್ಭವಿಸುತ್ತದೆ ಎಂದು ತಿಳಿಸಿದರು ಹಣವನ್ನು ವರ್ಗಾಯಿಸುವ ಮುನ್ನ MOU ಕರಡನ್ನು ಸಿಂಡಿಕೇಟ್ ಸಭೆಯ ಅನುಮೋದನೆ ಪಡೆಯಬೇಕೆಂದು ಅಭಿಪ್ರಾಯಪಟ್ಟರು. MOU ಇಲ್ಲದೆ ಇರುವುದರಿಂದ ಸಿಂಡಿಕೇಟ್ ಸಭೆಯು ಈ ವಿಷಯದಲ್ಲಿ ಮುಂದುವರೆಯಬಾರದು ಎಂದರು.

ಮಾನ್ಯ ಸಭಾಧ್ಯಕ್ಷರು ದಿನಾಂಕ. 25.2.2021 ರಂದು ನಡೆದ ಸಿಂಡಿಕೇಟ್ ಸಭೆಯ ನಡಾವಳಿಗಳನ್ನು ಅನುಸರಿಸಿ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ ರೂ. 150.00 ಕೋಟಿಯನ್ನು ಒಂದೇ ಸಲ ಬಿಡುಗಡೆ ಮಾಡಲು ಸಾಧ್ಯವಿಲ್ಲ ಮತ್ತು ವಿಶ್ವವಿದ್ಯಾನಿಲಯದಲ್ಲಿ ಅಷ್ಟು ಹಣವು ಇಲ್ಲ ಸರ್ಕಾರ ಯಾವ ಸಂಸ್ಥೆಗೆ ಕಾಮಗಾರಿಯನ್ನು ವಹಿಸಲು ನಿರ್ಧರಿಸುವುದೋ ಅ ಸಂಸ್ಥೆಗೆ ಹಂತ ಹಂತವಾಗಿ ಹಣವನ್ನು ವರ್ಗಾಯಿಸಲಾಗುವುದು ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ರವರು New Academic Block ಹೇಗೆ ಇರಬೇಕೆಂದು ತಿಳಿಸಲು 10 ದಿನಗಳ ಕಾಲಾವಕಾಶವನ್ನು ದಿನಾಂಕ 25.2.2021 ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ನಿರ್ಧರಿಸಿ ಸಭೆಯನ್ನು ಮುಂದೂಡಲಾಗಿತ್ತು. ಇದಕ್ಕೆ ಸಂಬಂಧಿಸಿದಂತೆ ಅವರ ಬಳಿ ಸದಸ್ಯರಾದ ಡಾ. ವಿ. ಗಾಯತ್ರಿರವರು ನೀಡಿದ್ದ ಪ್ರತಿಯನ್ನು ಕುಲಸಚಿವರಿಗೆ ತಲುಪಿಸಿ ಅದರ ಪ್ರತಿಗಳನ್ನು ಎಲ್ಲರಿಗೂ ನೀಡಲು ಕೋರಿದರು ಮತ್ತು ಅದರಲ್ಲಿ ರಸಾಯನ ಶಾಸ್ತ್ರ ಹಾಗೂ ವಾಣಿಜ್ಯ ವಿಭಾಗದ ಪ್ರಾಧ್ಯಾಪಕರು ಸಹಿ ಮಾಡಿರುವುದಾಗಿ ತಿಳಿಸಿದರು.

ಮಾನ್ಯ ಸಭಾಧ್ಯಕ್ಷರು ಆ ಪ್ರಸ್ತಾವನೆಯನ್ನು ಅವಲೋಕಿಸಿ ಇದರಲ್ಲಿ ಬೆ.ನ.ವಿ ಪ್ರಾಧ್ಯಾಪಕರಗಳು ಸಹಿ ಮಾಡಿದ್ದಾರೆ. ಈ ನಿರ್ಣಯವನ್ನು ಯಾವ ಸಭೆಯಲ್ಲಿ ಮಾಡಲಾಯಿತು, ಯಾರು ಸಭೆಯನ್ನು ಕರೆದರು ಎಂಬುದು ಸ್ಪಷ್ಟವಾಗಿಲ್ಲ ಮತ್ತು ಈ ಸಭೆಗೆ ತಮಗೆ ಬೇಕಾದವರನ್ನು ಮಾತ್ರ ಕರೆಯಲಾಗಿದೆ ಇಲ್ಲಿಯೂ ತಾರತಮ್ಯವನ್ನು ಮಾಡಲಾಗಿದೆ ಹಾಗೂ ಇದರಲ್ಲಿ ಅಥಿತಿ ಉಪನ್ಯಾಸಕರುಗಳೂ ಸಹಿ ಹಾಕಿದ್ದಾರೆ. ಅವರಿಗೂ ಈ ವಿಷಯಕ್ಕೂ ಸಂಬಂಧವಿಲ್ಲ ಮತ್ತು ಕೆಲವು ಸಿಂಡಿಕೇಟ್ ಸದಸ್ಯರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರುಗಳಿಗೆ ಪ್ರಚೋದನೆಮಾಡಿ ಸಭೆ ನಡೆಸಿ ತಾವೂಗಳು ಈ ಸಭೆಯಲ್ಲಿ ಭಾಗವಹಿಸಿ ಈ ರೀತಿ ನಿರ್ಣಯಗಳನ್ನು ಮಾಡಿ ಇಂದು ಸಿಂಡಿಕೇಟ್ ಸಭೆ ಮುಂದೆ ಮಂಡಿಸಿ ಅನುಮೋದಿಸಲು ಆಗ್ರಹಿಸುತ್ತಿರುವುದು ಸಮಂಜಸವಲ್ಲ ಈ ರೀತಿ ಸಿಂಡಿಕೇಟ್ ಸದಸ್ಯರು ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಲ್ಲೇ ಗುಂಪುಗಾರಿಕೆಯನ್ನ ಸೃಷ್ಟಿಸಿ ಶೈಕ್ಷಣಿಕ ವಾತಾವರಣವನ್ನು ಕಲುಷಿತಗೊಳಿಸುತ್ತಿರುವುದು ಸರಿಯಾದ ಕ್ರಮವಲ್ಲವೆಂದು ತಿಳಿಸಿದರು. ಮುಂದುವರೆದು ಈ ವಿಷಯವು ಸಿಂಡಿಕೇಟ್ ಸಭೆಯ ಕಾರ್ಯಸೂಚಿ ಆಗದೆ ಇರುವುದರಿಂದ ಪರಿಗಣಿಸಲು ಸಾಧ್ಯವಿಲ್ಲವೆಂದರು.

ಮಾನ್ಯ ಸದಸ್ಯರಾದ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ ನವರು ಪ್ರಸ್ತಾವನೆಯ ಬಗ್ಗೆ ಮಾತನಾಡುತ್ತಾ ವಿಶ್ವವಿದ್ಯಾಲಯದ ಕುಲಸಚಿವರು ಈಗಾಗಲೇ 2-3 ಬಾರಿ ಸದರಿ ಪ್ರಾಧ್ಯಾಪಕರುಗಳಿಗೆ ಪತ್ರ ಬರೆದು Master Planನಲ್ಲಿ ಏನಾದರೂ ಬದಲಾವಣೆ ಅಥವಾ ಸಲಹೆಗಳು ಇದ್ದರೆ ಸೂಚಿಸಲು ಕೋರಿದ್ದರೂ ಪ್ರತಿಕ್ರಿಯೆ ನೀಡದ ಈ ಪ್ರಾಧ್ಯಾಪಕರುಗಳು ಈಗ ಏಕಾ ಏಕಿ ಈ ರೀತಿ ಬದಲಾವಣೆ ಬಗ್ಗೆ ಸಹಿ ಮಾಡಿ ಕೊಟ್ಟಿರುವುದು ಸಮಂಜಸಲ್ಲ ಮತ್ತು ಇದು ಸರಿಯಾದ ಕ್ರಮವಲ್ಲ ಅದ್ದರಿಂದ ಈ ಪ್ರಾಧ್ಯಾಪಕರುಗಳಿಗೆ ಒಂದು ನೋಟಿಸ್ ನೀಡಿ ವಿವರಣೆ ಕೇಳಿ ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ಕೋರಿದರು.

ಮಾನ್ಯ ಸದಸ್ಯರಾದ ಶ್ರೀ ಕರಣ್ ಕುಮಾರ್ ರವರು, ಕುಲಸಚಿವರಿಗೆ ತಲುಪಿಸ ಬೇಕಾಗಿರುವುದು ಸರಿಯಾದ ಕ್ರಮ ಕುಲಸಚಿವರು ಅದನ್ನು ಸಿಂಡಿಕೇಟ್ ಸಭೆಗೆ ಮಂಡಿಸಬೇಕಾಗಿರುತ್ತದೆ, ಸಭೆಯ ಮಧ್ಯದಲ್ಲಿ ಯಾವುದೇ ಪ್ರಸ್ತಾವನೆಯನ್ನು ಸ್ವೀಕರಿಸಲು ಸಾಧ್ಯವಿಲ್ಲ ಮತ್ತು ಸ್ವಾಗತರ್ಹವಲ್ಲ ಎಂದು ಅವರ ಅಭಿಪ್ರಾಯವನ್ನು ತಿಳಿಸಿದರು.

ಮಾನ್ಯ ಸಭಾಧ್ಯಕ್ಷರು ಮಾತಾನಾಡುತ್ತಾ ವಿಶ್ವವಿದ್ಯಾನಿಲಯದ ಅಧಿಕಾರಿಗಳನ್ನು ಕಡೆಗಣಿಸಿ ಸಿಂಡಿಕೇಟ್ ಸದಸ್ಯರನ್ನು ಸೇರಿಸಿಕೊಂಡು ಈ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಸಮಾನಾಂತರವಾಗಿ ಆಡಳಿತ ನಡೆಯುವಂತೆ ಕಂಡು ಬರುತ್ತಿದೆ. ಹಾಗಾದರೆ ಅಧಿಕಾರಿಗಳು ಯಾಕೆ ಇರಬೇಕು ಸಿಂಡಿಕೇಟ್ ಸದಸ್ಯರೆ ಆಡಳಿತವನ್ನು ವಹಿಸಿಕೊಳ್ಳಬಹುದು ಎಂದು ತಿಳಿಸಿದರು. ಈ ರೀತಿಯ 2-3 ಸಭೆಗಳನ್ನು ವಿಶ್ವವಿದ್ಯಾಲಯದ ಅವರಣದಲ್ಲಿ ವ್ಯವಸ್ಥಿತವಾಗಿ ನಡೆಸಿ ಅಧಿಕಾರಿಗಳ ಗಮನಕ್ಕೂ ತರದೆ ಇಂದು ಸಭೆಯ ಮುಂದೆ ಪ್ರಸ್ಥಾಪಿಸುತ್ತಿರುವುದು ಸಮಂಜಸಲ್ಲವೆಂದು ತಿಳಿಸುತ್ತಾ ಈ ವಿಷಯದ ಬಗ್ಗೆ ಚರ್ಚೆ ಅನಗತ್ಯವೆಂದು ತಳಿಸಿದರು.

ಮಾನ್ಯ ಸದಸ್ಯರಾದ ಡಾ. ಹೆಚ್ ಟಿ ಅರವಿಂದ್ ರವರು ಇದು ಸರಿಯಾದ ಕ್ರಮವಲ್ಲ (Wrong Precedence) ವಿಶ್ವವಿದ್ಯಾನಿಲಯದ ವತಿಯಿಂದ ಯಾವುದೇ ಪ್ರಸ್ತಾವನೆ ಈ ಸಭೆಗೆ ಮಂಡಿಸಬೇಕಾಗಿರುವುದು ಸೂಕ್ತ ಕ್ರಮ. ಯಾವುದೇ ಸಂದರ್ಭ ಇರಬಹುದು ಒಳ್ಳೆಯ ಭಾವನೆಯಿಂದ ವಿಶ್ವವಿದ್ಯಾನಿಲಯದ ಹಿತದೃಷ್ಟಿಯಿಂದಲೂ ಸಹ ಪ್ರಸ್ತಾವನೆಯನ್ನು ಈ ಸಭೆಯಲ್ಲಿ ಸಲ್ಲಿಸಿದ್ದರೂ ಸಹ ಒಪ್ಪಲು ಅವಕಾಶ ಇರುವುದಿಲ್ಲ ಮತ್ತು ಇದು ಒಂದು ಕೆಟ್ಟ ಸಂಪ್ರಾದಾಯ ಈ ರೀತಿ ಮಾಡಬಾರದು ಇದು ಉತ್ತಮ ಆಡಳಿತವಲ್ಲವೆಂದು ಅಭಿಪ್ರಾಯ ಪಟ್ಟರು. ವಿಶ್ವವಿದ್ಯಾಲಯದ Campus Redevelopment ಬಗ್ಗೆ ಇದರ ಸಂಪೂರ್ಣ ಯೋಜನೆಯ ತಯಾರಿಸಿದವರು Presentation ಕೊಟ್ಟಾಗ ಎಲ್ಲಾ ಅಧಿಕಾರಿಗಳು ಹಾಜರಿದ್ದರು ಮತ್ತು ಬರಹದ ಮೂಲಕ ಅವರವರ ಅಭಿಪ್ರಾಯಗಳನ್ನು ಮತ್ತು ಏನಾದರೂ ಬದಲಾವಣೆಗಳಿದ್ದರೆ ಕುಲಸಚಿವರಿಗೆ ಬರವಣಿಗೆಯಲ್ಲಿ ತಿಳಿಸಲು ಸೂಚಿಸಲಾಗಿತ್ತು ಆಗ ತಮ್ಮ ಅಭಿಪ್ರಾಯಗಳನ್ನು ತಿಳಿಸದ ಪ್ರಾಧ್ಯಾಪಕರುಗಳು ಮತ್ತು ಸದಸ್ಯರುಗಳು ಇಂದು ಇಲ್ಲಿ ತಂದಿರುವುದು ಬಹಳ ತಪ್ಪು ಎಂದು ಅಭಿಪ್ರಾಯ ಪಟ್ಟರು ಕಾರ್ಯಸೂಚಿ ಇಲ್ಲದೇ ಆ ಪ್ರಸ್ತಾವನೆಯನ್ನು Circulate ಮಾಡಬಾರದು ಮತ್ತು ಒಪ್ಪಲಾಗುವುದಿಲ್ಲ ಇದಕ್ಕೆ ಯಾವುದೇ ಮನ್ನಣೆ ಇರುವುದಿಲ್ಲ ಎಂದು ತಿಳಿಸಿದರು. ಮುಂದುವರೆದು ಇದನ್ನು ಖಂಡಿಸುವುದಾಗಿ ತಿಳಿಸುತ್ತಾ ಈ ಪ್ರಾಧ್ಯಾಪಕರುಗಳಿಗೆ ವಿವರಣೆ ಕೇಳಿ ನೋಟೀಸ್ ನೀಡಲು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಹೆಚ್ ಎನ್ ಹರಿಪ್ರಸಾದ ರವರು ಡಿಸೆಂಬರ್ ನಲ್ಲಿ ಒಂದು ಅನೌಪಚಾರಿಕ ಸಭೆಯನ್ನು ಕರೆದು ಈ ವಿಷಯದ ಬಗ್ಗೆ ಚರ್ಚಿಸಲಾಗಿತ್ತು, 05 ಜನವರಿ ಒಳಗೆ ಅವರವರ ವಿಭಾಗಗಳಲ್ಲಿ ವಿಶ್ವವಿದ್ಯಾನಿಲಯದಲ್ಲಿ ಬೇಕಾಗಬಹುದಾದ ಮೂಲಭೂತ ಸೌಕರ್ಯಗಳ ಬಗ್ಗೆ ತಿಳಿಸಲು ಕೋರಲಾಗಿತ್ತು. 3 ಇ-ಮೇಲ್ ಗಳನ್ನು ಕುಲಸಚಿವರು ಕಳುಹಿಸಿದ್ದರೂ ಸಹ ಕುಲಸಚಿವರಿಗೆ ಸಲ್ಲಿಸದೆ ಈ ಸಭೆಯ ಮಧ್ಯೆ ತಂದಿರುವುದು ಅಸಮಂಜಸ, ಮತ್ತು ಇದನ್ನು ಒಪ್ಪಲು ಸಾಧ್ಯವಿಲ್ಲ ಹಾಗೂ ಇದನ್ನು ತಿರಸ್ಕರಿಸಬೇಕೆಂದು ತಿಳಿಸಿದರು, ಮತ್ತು ಇದನ್ನು ಖಂಡಿಸುವುದಾಗಿ ತಿಳಿಸುತ್ತಾ ಈ ಪ್ರಾಧ್ಯಾಪಕರುಗಳಿಗೆ ವಿವರಣೆ ಕೇಳಿ ನೋಟೀಸ್ ನೀಡಲು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಕರಣ್ ಕುಮಾರ್ ರವರು, ಕ್ಯಾಪಂಸ್ ರೀ ಡೆವಲೆಪ್‌ಮೆಂಟ್ ಬಗ್ಗೆ ವಿಶ್ವವಿದ್ಯಾನಿಲಯದ ಯಾವುದೇ ನೌಕರರು ಚರ್ಚೆಯಲ್ಲಿ ಭಾಗವಹಿಸಬಹುದು, ಅಭಿಪ್ರಾಯಗಳನ್ನು Input ನೀಡಬಹುದು ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ ನವರು ಕ್ಯಾಪಂಸ್ ರೀ ಡೆವಲೆಪ್‌ಮೆಂಟ್ ಬಗ್ಗೆ ಹೇಳಿರುವುದು ತಪ್ಪು ಎಂದು ಹೇಳುತ್ತಿಲ್ಲ 3 ನೋಟೀಸ್ ನೀಡಿ ಸಲಹೆ ಸೂಚನೆಗಳನ್ನು ಕೇಳಿದ್ದರೂ ನೀಡದ ಈ ಪ್ರಾಧ್ಯಾಪಕರುಗಳು ಇಂದು ಸಿಂಡಿಕೇಟ್ ಸದಸ್ಯರೊಂದಿಗೆ ಸಭೆ ನಡೆಸಿ ಸಹಿ ಮಾಡಿರುವುದು, ಇದನ್ನು ಕುಲಸಚಿವರ ಮುಖಾಂತರ ನೀಡದೆ ನೇರವಾಗಿ ಈ ಸಭೆಗೆ ತಂದಿರುವುದು ವಿಷಾದನೀಯ ಮತ್ತು ಅದನ್ನು ಖಂಡಿಸುವುದಾಗಿ ತಿಳಿಸುತ್ತಾ ವಿವರಣೆ ಕೇಳಿ ನೋಟೀಸ್ ನೀಡಲು ತಿಳಿಸಿದರು

ಮಾನ್ಯ ಕುಲಸಚಿವರು ಮಾತಾನಾಡುತ್ತಾ ಯಾರು ಸಭೆಯನ್ನು ಕರೆದರು ಎಂದು ಸ್ಪಷ್ಟತೆ ಇರುವುದಿಲ್ಲ ವಿಶ್ವವಿದ್ಯಾನಿಲಯದ ಅನುಮತಿ ಇಲ್ಲದೆ ಡೀನ್‌ರವರು ಕಾಲೇಜಿನ ಪ್ರಾಂಶುಪಾಲರನ್ನು ಕರೆದು ಸಭೆಯನ್ನು ನಡೆಸಿದ್ದಾರೆ. ಇದು ಸರಿಯಾದ ಕ್ರಮವಲ್ಲ ಅಲ್ಲಿಗೆ ವಿಶ್ವವಿದ್ಯಾನಿಲಯದಲ್ಲಿ ಕುಲಸಚಿವರ ಅವಶ್ಯಕತೆ ಏನು ಇದೆ ಎಂದರು.

ಮಾನ್ಯ ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್ ರವರು ಮಾತನಾಡುತ್ತ 8–10 ದಿನಗಳ ಕಾಲಾವಕಾಶ ಸಿಂಡಿಕೇಟ್‌ನಲ್ಲಿ ಕೇಳಿದುದೇ ಪ್ರಾಧ್ಯಾಪಕರುಗಳ ಅಭಿಪ್ರಾಯಗಳನ್ನು ಪಡೆಯಲು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರುಗಳು, ಅವರಲ್ಲಿ ಮತ್ತು ಸದಸ್ಯರಾದ ಶ್ರೀ ಕರಣ್ ಕುಮಾರ್ ರವರಲ್ಲಿ ವಿಶ್ವಾಸವಿಟ್ಟು ಎರಡು ಹಂತಗಳಲ್ಲಿ ಸಭೆಯಲ್ಲಿ ಚರ್ಚಿಸಿದರು ಎಂದು ತಿಳಿಸಿದರು. 8/10 ದಿನಗಳು ಯಾವುದೇ Communication ಮಾಡಿಲ್ಲ ದಿನಾಂಕ. 16.3.2021, 17.3.2021 ರಂದು ಮೂಲ ಭೂತ ಸೌಕರ್ಯದ ಬಗ್ಗೆ ವಿಶ್ವವವಿದ್ಯಾನಿಲಯದಿಂದ ಪತ್ರಗಳನ್ನು ಕಳುಹಿಸಲಾಗಿದೆ. ಕೆಲಸ ಶುರು ಮಾಡಿ ಕೆಲವು ವಿಭಾಗದವರು ಕಳುಹಿಸಿಕೊಟ್ಟಿದ್ದಾರೆ ದಿನಾಂಕ. 19.3.2021 stake holders views ಸಂಗ್ರಹ ರೂಪದಲ್ಲಿ ತಂದಿದ್ದಾರೆ. ಕುಲಸಚಿವರ ಮುಖಾಂತರ ಬಂದಿರುವುದಿಲ್ಲ. ಸಮಯ ಅವಕಾಶ ಕಮ್ಮಿ ಎಲ್ಲರಿಗೂ ಇದೆ ಆದುದರಿಂದ ಈ ಸಭೆಯ ಸದಸ್ಯರಾಗಿ ಇಲ್ಲಿ ಸಲ್ಲಿಸಿರುವುದಾಗಿ ತಿಳಿಸಿ, ತಪ್ಪು ತಿಳಿಯುವ ಅವಶ್ಯಕತೆ ಇರುವುದಿಲ್ಲ, ಇದನ್ನು ಕುಲಸಚಿವರು ಮತ್ತು ಮಾನ್ಯ ಕುಲಪತಿಗಳು ನಿರ್ಧರಿಸಬಹುದಾಗಿರುತ್ತದೆ ಎಂದು ಅವರ ಅಭಿಪ್ರಾಯ ತಿಳಿಸಿದರು.

ಮಾನ್ಯ ಸದಸ್ಯರಾದ ಡಾ. ಹೆಚ್ ಟಿ ಅರವಿಂದ್ ರವರು ಮಾತನಾಡುತ್ತಾ ಈ ಪ್ರಾಧ್ಯಾಪಕರುಗಳು ಸಭೆ ಮಾಡುವಾಗ ಏಕೆ ಕೇವಲ ಕೆಲವೇ ಸಿಂಡಿಕೇಟ್ ಸದಸ್ಯರನ್ನು ಮಾತ್ರ ಕರೆದಿರಿವುದು, ನಾವುಗಳು ಸದಸ್ಯರಲ್ಲವೇ, ಮತ್ತು ಈ ಹಿಂದೆ ನಾವುಗಳು ಈ ವಿಭಾಗಗಳಿಗೆ ಬೇಟಿ ನೀಡಿ ವಾಸ್ತವ ಸ್ಥಿತಿಯನ್ನು ಅವಲೋಕನೆ ಮಾಡುವಾಗ ಅವರುಗಳು ಆವಾಗ ಯಾವುದೇ ಪ್ರತಿಕ್ರಿಯೆಯನ್ನು ತೋರಿಸಿರುವುದಿಲ್ಲ ಅಂದು ಆ ಸದಸ್ಯರ ಮೇಲೆ ಇದ್ದ ನಂಬಿಕೆ ವಿಶ್ವಾಸ ಇಂದು ಇಲ್ಲ ಎಂದರೆ ಸಮಾನಾಂತರವಾಗಿ ವಿಶ್ವವಿದ್ಯಾನಿಲಯದ ಆಡಳಿತವನ್ನು ನಡೆಸುತ್ತಿರುವಂತೆ ಕಂಡು ಬರುತ್ತದೆ ಎಂದು ಅಭಿಪ್ರಾಯ ಪಟ್ಟರು.

ಮಾನ್ಯ ಸದಸ್ಯರಾದ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ ನವರು ಸಂಬಂಧಿಸಿದವರಿಗೆ ನೋಟೀಸ್ ನೀಡಿ ವಿವರಣೆಯನ್ನು ಪಡೆಯುವುದು ಸೂಕ್ತ ಎಂದು ಅಭಿಪ್ರಾಯ ಪಟ್ಟರು. ಹಾಗೂ ಈ ಎಲ್ಲಾ ಬೆಳವಣಿಗೆಗಳನ್ನು ಗಮನಿಸಿದರೆ ಈ ಸಭೆ ನಡೆಸಿದವರ ಉದ್ದೇಶವೇ ಬೇರೆ ಇದೆ ಮತ್ತು ವಿಶ್ವವಿದ್ಯಾಲಯದ ಅಭಿವೃದ್ಧಿಯನ್ನು ತಡೆಯುವ ಸಂಚು ಎಂದು ಅಭಿಪ್ರಾಯ ಪಟ್ಟರು.

ಮಾನ್ಯ ಸದಸ್ಯರಾದ ಡಾ. ಆರ್. ಕೆ. ಚಂದ್ರನಾಥ್ ರವರು ಮಾತನಾಡುತ್ತಾ ವಿಶ್ವವಿದ್ಯಾಲಯದ ವಿಭಾಗಗಳ ಕಟ್ಟಡಗಳು ಶಿಥಿಲಾವಸ್ಥೆಯಿಂದ ಕೂಡಿದ್ದು ಈ ಪ್ರಾಧ್ಯಾಪರುಗಳು ಎರಡು ವರ್ಷಗಳಿಂದ ಮೌನವಾಗಿದ್ದು ಆಗ ಇಲ್ಲದೆ ಇದ್ದ ಕಾಳಜಿ ಇದ್ದಕ್ಕಿಂದಂತೆ ಇಂದು ಜ್ಞಾನೋದಯವಾಗಿದೆ. ಸಂಬಂಧಿಸಿದವರಿಗೆ ನೋಟೀಸ್ ನೀಡಿ ವಿವರಣೆಯನ್ನು ಪಡೆಯುವುದು ಸೂಕ್ತ ಎಂದು ಹಿರಿಯ ಸದಸ್ಯರಾಗಿ ಅಭಿಪ್ರಾಯ ಪಟ್ಟರು.

ಮಾನ್ಯ ಕುಲಸಚಿವರು ಸದಸ್ಯರಾದ ಪ್ರೊ ವಿ. ಗಾಯತ್ರಿರವರನ್ನು ಈ ಬಗ್ಗೆ ವಿವರಣೆ ನೀಡಲು ಕೋರಿದರು. ಗಾಯತ್ರಿರವರು ಸಿಂಡಿಕೇಟ್ ಸಭೆಯಲ್ಲಿ 8–10 ದಿನಗಳ ಕಾಲಾವಕಾಶ ನೀಡಿದ್ದಾರೆ ಅದರಂತೆ Output ಇದ್ದರೆ ಕೊಡಿ ಎಂದು ಸದಸ್ಯರಾದ ಶ್ರೀಮತಿ ಜ್ಯೋತಿ ವಿಜಯ್‌ರವರು ವಿಭಾಗಕ್ಕೆ ಬಂದಿದ್ದರು ಮತ್ತು ಕೇಳಿದರು ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಡಾ. ಹೆಚ್ ಟಿ ಅರವಿಂದ್ ರವರು ಇದು ವಿಷಾದನೀಯವಾದ ವಿಷಯ ಇದೊಂದು ಕೆಟ್ಟ ಸಂಪ್ರದಾಯ ಈ ಪ್ರಸ್ತಾವನೆಯನ್ನು ವಿಶ್ವವಿದ್ಯಾನಿಲಯವು ತಿರಸ್ಕರಿಸ ಬೇಕು, ಇನ್ನು ಮುಂದೆ ಈ ತರಹ ಆಗಬಾರದು ಎಂದು ಅವರ ಅಭಿಪ್ರಾಯ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಕರಣ್ ಕುಮಾರ್ ರವರು ಮಾತನಾಡುತ್ತಾ ಸಭೆಯಲ್ಲಿ ಭಾಗಹಿಸಿದ ಪ್ರಾಧ್ಯಾಪಕರುಗಳು ಚರ್ಚಿಸಿ ವಿಭಾಗಳಿಗೆ ಅವಶ್ಯಕವಾಗಿ ಏನು ಬೇಕಾಗಿದೆ ಎಂದು ತಿಳಿಸಿದ್ದಾರೆ ಯಾರ ಬಗ್ಗೆಯೂ ಅಥವಾ ಯಾವುದೇ ಸದಸ್ಯರ ಬಗ್ಗೆಯೂ ಚರ್ಚಿಸಿಲ್ಲ ಇದು ಕುಲಸಚಿವರ ಮುಖಾಂತರ ಬರಬೇಕು ಎಂದು ತಿಳಿಸಿದರು. ಹೊಸ ಅಕಾಡೆಮಿಕ್ ಬ್ಲಾಕ್‌ನ ವಿಷಯ ಚರ್ಚೆ ಬಂದಾಗ 20-25 ನಿಮಿಷಗಳ ಕಾಲಾವಕಾಶ ನೀಡಬೇಕೆಂದು ಕೋರಿ ಆಗ ಚರ್ಚಿಸುವುದಾಗಿ ತಿಳಿಸಿದರು. ಕಾಮರ್ಸ್ ಕಟ್ಟಡ ಹೊಸ ಕಟ್ಟಡ ಅದನ್ನು ಒಡೆದು ಹಾಕಲು Plan ನಲ್ಲಿ ಸೂಚಿಸಿದೆ. ಯಾಕೆ ಅಂತಹ ಒಳ್ಳೆಯ ಕಟ್ಟಡವನ್ನು ಒಡೆದು ಹಾಕಲು ನಿರ್ಣಯಿಸಲಾಗಿದೆ ಎಂದು ಕೇಳಿದರು.

ಮಾನ್ಯ ಸಭಾಧ್ಯಕ್ಷರು ಮಾತನಾಡುತ್ತ ಕಾಮರ್ಸ್ ವಿಭಾಗದ ಪಕ್ಕದಲ್ಲಿ ಇರುವ ಗ್ಲೋಬಲ್ ಭಾಷೆಗಳ ಕಟ್ಟಡ ತುಂಬಾ ಹಳೆಯದಾಗಿದೆ ಆ ಕಟ್ಟಡವು ಕೆಳ ಮಟ್ಟದಲ್ಲಿ ಇರುವುದರಿಂದ drainage ನೀರು ವಿಭಾಗದ ಒಳಗೆ ಬರುತ್ತಿದೆ. ಆದುದರಿಂದ ಕಾಮರ್ಸ್ ಕಟ್ಟಡ ಹೊಸ ಕಟ್ಟಡ ಅದನ್ನು ಒಡೆದು ಹಾಕುವುದಿಲ್ಲ ಎಂದು ಸಭೆಗೆ ತಿಳಿಸಿದರು. ಹೊಸ/ಹಳೆ ಕಾಮರ್ಸ್ ವಿಭಾಗದ ಕಟ್ಟಡಗಳನ್ನು ಒಡೆದು ಹಾಕಲು ಸಾದ್ಯವಿಲ್ಲವೆಂದು ಸ್ಪಷ್ಟನೆ ನೀಡಿದರು.

ಮಾನ್ಯ ಸದಸ್ಯರಾದ ಶ್ರೀ ಕರಣ್ ಕುಮಾರ್ ರವರು ಮಾತನಾಡುತ್ತಾ ವಿಶ್ವವಿದ್ಯಾಲಯವು ಯೋಜಿಸಿರುವ ಹೊಸ ಶೈಕ್ಷಣಿಕ ಕಟ್ಟಡದಲ್ಲಿ class rooms, entry lobby, meeting room, carpet area + super built-up area = 45.00 sq.ft carpet area. 25% other passage, staircase, super built-up area 1% to 2.5% extra area comes to 55.000 sq.ft in this building. Ground floor- length and width is not mentioned, lobby, height – blocks 25% exceeding usable area including internal walls = 55,000 sq.ft. Ground floor + 5 floors may come.

ಮಾನ್ಯ ಸಭಾಧ್ಯಕ್ಷರು ಮಾತನಾಡುತ್ತಾ ಶೈಕ್ಷಣಿಕ ಕಟ್ಟಡಕ್ಕೆ G+6 ಮಹಡಿಗಳಿಗೆ Plan ಮಾಡಲಾಗಿದೆ ಹಾಗೂ ಈ ಹೊಸ ಕಟ್ಟಡಗಳ ನಿರ್ಮಾಣದ ಯೋಜನೆಯನ್ನು ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ವಿಭಾಗದ ವಾಸ್ತುಶಿಲ್ಪಿಗಳು ಕೂಲಂಕುಶವಾಗಿ ಅಧ್ಯಯನ ಮಾಡಿ ತಯಾರಿಸಿರುತ್ತಾರೆ ಈ ವಾಸ್ತುಶಿಲ್ಪದ ಯೋಜನೆಯ ಪರಿಣಿತಿಯು ನಮ್ಮಗಳಿಗೆ ಇಲ್ಲದಿರುವುದರಿಂದ ಸದರಿ ಸಂಸ್ಥೆಯವರು ಕೊಟ್ಟಿರುವ ಯೋಜನೆಯ ಬಗ್ಗೆ ಸವಿಸ್ತಾರವಾಗಿ ಕಾಮಗಾರಿ ಸಮಿತಿಯಲ್ಲಿ ಚರ್ಚಿಸಲಾಗಿದೆ. ಈ ಸಮಿತಿಯಲ್ಲಿ ಸರ್ಕಾರದ ಮುಖ್ಯ ಅಭಿಯಂತರರು, ರಾಜ್ಯದ ಮುಖ್ಯ ವಾಸ್ತುಶಿಲ್ಪಿಗಳು, ಲೋಕೋಪಯೋಗಿ ಇಲಾಖೆಯ ಕಟ್ಟಡ ವಿಭಾಗಗಳ ಅಧೀಕ್ಷಕ ಅಭಿಯಂತರರು, ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಅಭಿಯಂತರರಿದ್ದು ಈ ಸಮಿತಿಯು ಈ ಯೋಜನೆಯನ್ನು ಸಂಪೂರ್ಣವಾಗಿ ಪರಾಮರ್ಶಿಸಿ ಮತ್ತು ನಕ್ಷೆಗೆ ಅನುಗುಣವಾಗಿ ತಗುಲುವ ವೆಚ್ಚವನ್ನೂ ವಿಶ್ಲೇಶಿಸಿ ಅನುಮೋದಿಸಿದೆ, ಆದ್ದರಿಂದ ಈ ಯೋಜನೆಯನ್ನು ಸಭೆಯು ಅನುಮೋದಿಸಬೇಕೆಂದು ಕೋರಿದರು.

ಮಾನ್ಯ ಸದಸ್ಯರಾದ ಶ್ರೀ ಕರಣ್ ಕುಮಾರ್ ರವರು ಹಾಗಾದರೆ Works Committee ರವರು 1+6 Floor – 55000 sq.st. (7 floors) rectangle each floor size ಬಗ್ಗೆ ವಿವರಗಳು ಕೊಟ್ಟರೆ ಚರ್ಚೆ ಮಾಡಲು ಅನುಕೂಲವಾಗುವುದು ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ ನವರು ಮಾತನಾಡುತ್ತಾ 1 1/2 ವರ್ಷದಿಂದ ಇದೇ ವಿಷಯದ ಬಗ್ಗೆ ಚರ್ಚೆ ನಡೆಸಲಾಗುತ್ತಿದೆ. ಅಂತಿಮ ನಿರ್ಣಯ ಇದುವರೆವಿಗೂ ಆಗಿರುವುದಿಲ್ಲ. ಇದೇ ನಿಟ್ಟಿನಲ್ಲಿ

ಚರ್ಚೆ ನಡೆಯುತ್ತಿದ್ದರೆ ಸಭೆಯಿಂದ ಹೊರ. ಹೋಗಲು ಅವರಿಗೆ ಅನುಮತಿ ನೀಡಬೇಕೆಂದು ಸಭಾಧ್ಯಕ್ಷರನ್ನು ಕೋರಿದರು.

ಮಾನ್ಯ ಸದಸ್ಯರಾದ ಶ್ರೀ ಕರಣ್ ಕುಮಾರ್ ರವರು ಪ್ರತಿಯೊಂದು Floor 55,000 Sq.ft or 60,000 Sq.ft ಅಂತ ಭಾವಿಸಿದರೂ 1 Sq.ft 6.00 ಲಕ್ಷ ನಿಗಧಿ ಪಡಿಸಿರುವ ಹಣ 31.57 ಕೋಟಿ.

ಮಾನ್ಯ ಸದಸ್ಯರಾದ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ ನವರು ಸದಸ್ಯರಾದ ಶ್ರೀ ಕರಣ್ ಕುಮಾರ್ ರವರು ಈ ಸಭೆಯನ್ನು ದಾರಿ ತಪ್ಪಿಸುತ್ತಿದ್ದಾರೆ ಮತ್ತು ಬೇರೆ ಕಡೆಗೆ ಗಮನ ಸೆಳೆಯುತ್ತಿದ್ದಾರೆ. ಈ ಕಟ್ಟಡ ವಿಶ್ವವಿದ್ಯಾನಿಲಯಕ್ಕೆ ಬೇಡವೇ ಬೇಡ ಎಂದು ಅಭಿಪ್ರಾಯ ಪಟ್ಟರು.

ಮಾನ್ಯ ಸದಸ್ಯರಾದ ಶ್ರೀ ಹೆಚ್ ಎನ್ ಹರಿಪ್ರಸಾದ ರವರು ಸದಸ್ಯರಾದ ಸತೀಶ ರವರು ಸಿವಿಲ್ ಇಂಜಿನಿಯರ್ ಆಗಿರುವುದರಿಂದ ಅವರಲ್ಲಿ ಈ ವಿಷಯದ ಬಗ್ಗೆ ವಿವರಿಸಲು ತಿಳಿಸಬಹುದು ಅಥವಾ ಇದನ್ನು ಗುರುತು ಮಾಡಿಕೊಂಡು ಯಾರು ಈ ಯೋಜನೆಯನ್ನು ರೂಪಿಸಿದ್ದಾರೋ ಅವರ ಬಳಿ Clarification ತೆಗೆದುಕೊಳ್ಳಬಹುದೆಂದು ಅಭಿಪ್ರಾಯ ಪಟ್ಟರು..

ಮಾನ್ಯ ಸದಸ್ಯರಾದ ಡಾ. ಹೆಚ್. ಟಿ. ಅರವಿಂದ್ ರವರು ಹಿಂದಿನ ಸಭೆಯಲ್ಲಿ 8ರಿಂದ 10ದಿನಗಳ ಕಾಲಾವಕಾಶವನ್ನು ನೀಡಿರುವ ಹಿನ್ನಲೆಯಲ್ಲಿ ಮಾಸ್ಟರ್ ಪ್ಲಾನ್‌ಗೆ ಯಾವುದಾದರೂ ಸಲಹೆಗಳು ಅಥವಾ ಬದಲಾವಣೆಗಳಿದ್ದರೆ ನೀಡಲು ಅವಕಾಶ ಕಲ್ಪಿಸಲಾಗಿತ್ತು ನಿಯಮಾನುಸಾರ ಬಂದಿರುವ ಪ್ರಸ್ತಾವನೆಗಳನ್ನು ಮಾಸ್ಟರ್ ಪ್ಲಾನ್‌ನಲ್ಲಿ ಮಾರ್ಪಾಡಾಗಿ ಸೇರಿಸಿಕೊಳ್ಳಬಹುದು ಮಾನ್ಯ ಸದಸ್ಯರಾದ ಶ್ರೀ ಸತೀಶ್‌ರವರು ಇಂಜಿನಿಯರಿಂಗ್‌ಗೆ ಸಂಬಂಧ ಪಟ್ಟವರಾಗಿರುವುದರಿಂದ ಅವರು ಈ ಬಗ್ಗೆ ವಿವರಿಸಬಹುದಾಗಿರುತ್ತದೆ ಎಂದು ಅಭಿಪ್ರಾಯ ಪಟ್ಟರು.

ಮಾನ್ಯ ಸದಸ್ಯರಾದ ಶ್ರೀ ಕರಣ್ ಕುಮಾರ್ ರವರು ಹೊಸ ಅಕ್ಯಾಡೆಮಿಕ್ ಬ್ಲಾಕ್‌ನಲ್ಲಿ 8 Item List ಆಗಿದೆ 31.00 ಕೋಟಿ ರೂಗಳನ್ನು ನಿಗಧಿ ಮಾಡಲಾಗಿದೆ ಇದನ್ನು ಒಪ್ಪಿಕೊಳ್ಳಬೇಕಾದರೆ ಪ್ರತಿಯೊಂದನ್ನು ವಿವರವಾಗಿ ನೋಡಿ ನಿರ್ಣಯಿಸಬೇಕಾಗಿರುತ್ತದೆ. Measurementಗಳನ್ನು ನೀಡದೆ ಇರುವುದರಿಂದ ಅವರು ತೀಕ್ಷ್ಣವಾಗಿ ಆಕ್ಷೇಪಿಸುವುದಾಗಿ ತಿಳಿಸಿದರು. SR ನಲ್ಲಿ 1.78 ಲಕ್ಷ ಇದೆ, ಆದರೆ ಇಲ್ಲಿ ಅದಕ್ಕಿಂತ ಹೆಚ್ಚು ಪಟ್ಟು ಕಂಡುಬರುತ್ತಿದೆ. ತುಂಬಾ ನ್ಯೂನತೆಗಳು ಇವೆ ಸಭಾಧ್ಯಕ್ಷರು ಈ ಕೂಡಲೆ ಮಾಹಿತಿಯನ್ನು ಒದಗಿಸಬೇಕೆಂದು ಕೋರಿದರು.

New Education Policy ಯಂತೆ 5,000 ಸ್ನಾತಕ ವಿದ್ಯಾರ್ಥಿಗಳಿಗೆ ಅನುವಾಗುವ ಹಾಗೆ 1,40,000 Sq.ft ಕಟ್ಟಡ ನಿರ್ಮಾಣವಾಗಬೇಕು ಕಟ್ಟಡಕ್ಕೆ ತಗಲಬಹುದಾದ ಅಂದಾಜು, ವೆಚ್ಚ 20.00 ಅಥವ 21.00 ಕೋಟಿ ಎಂದು ನಮೂದಿಸಲಾಗಿದೆ. ಈ ಖರ್ಚು ಮೀರದಂತೆ ಕಾಮಗಾರಿಯನ್ನು ಪೂರೈಸಬೇಕು ಮತ್ತೊಮ್ಮೆ Revise ಮಾಡಿ, 32.00ಕೋಟಿ ನಿಗಧಿಪಡಿಸಿರುವುದು ತಪ್ಪು ನಿರ್ದಾರ, ಒಟ್ಟು Sq.ft ಎಷ್ಟು ಎಂದು ಎಲ್ಲೂ ತಿಳಿಸಿಲ್ಲ, ಇದನ್ನು ಸರಿಮಾಡಿಕೊಳ್ಳಲು ಈಗಲೂ ಅವಕಾಶವಿದೆ. Sports block ಅಡಿಯಲ್ಲಿ ಹೊರಾಂಗಣ ಕ್ರೀಡೆಗಳಿಗೆ ರೂ.3.00 ಕೋಟಿ, ಒಳಾಂಗಣ ಕ್ರೀಡೆಗಳಿಗೆ ರೂ. 1.18 ಕೋಟಿ ಮತ್ತು ಈಜು ಕೊಳದ ನಿರ್ಮಾಕ್ಕೆ ರೂ. 16.00 ಕೋಟಿಯಂತೆ ಒಟ್ಟು 20.00 ಕೋಟಿರೂಗಳು ತಗಲ ಬಹುದಾದ ವೆಚ್ಚ ಎಂದು ಗುರುತಿಸಲಾಗಿದೆ. ಅದೇ ರೂ. 20.00 ಕೋಟಿಗಳನ್ನು ಎಫ್‌ಡಿನಲ್ಲಿ ಇಟ್ಟರೆ ಅದರಿಂದ ಬರಬಹುದಾದ ಬಡ್ಡಿ ಹಣವನ್ನು ವಿದ್ಯಾರ್ಥಿಗಳಿಗೆ ನೀಡಬಹುದಾಗಿರುತ್ತದೆ. ಕ್ರೀಡಾಪಟುಗಳು ಅವರಿಗೆ ಇಷ್ಟವಿರುವ ಆಟದಲ್ಲಿ ಬೇಕಾಗಿರುವ ಕಡೆ ಕೋಚ್ ಪಡೆಯಲು

ಅನುವು ಮಾಡಿಕೊಟ್ಟು ಅಂತಹ ವಿದ್ಯಾರ್ಥಿಗಳು ಕೋಚ್‌ಗೆ ಬರಿಸಿರುವ ಹಣವನ್ನು ಅವರಿಗೆ ವಿಶ್ವವಿದ್ಯಾನಿಲಯದ ವತಿಯಿಂದ ನೇರ ಮರು ಪಾವತಿಸಬಹುದಾಗಿರುತ್ತದೆ ಎಂದು ಅಭಿಪ್ರಾಯ ಪಟ್ಟರು.

ವಿಶ್ವವಿದ್ಯಾನಿಲಯದಲ್ಲೆ ಕ್ರೀಡಾ ವಿಭಾಗ ಈಜುಕೊಳ ಎಂದು ಎಲ್ಲಾ ಕಟ್ಟಡಗಳನ್ನು ನಿರ್ಮಾಣ ಮಾಡಿದ ಮೇಲೆ ಇಲ್ಲಿನ ನೌಕರರಿಗೆ ವೇತನ, ನಿರ್ವಹಣೆವೆಚ್ಚ, ನೀರಿನ ವೆಚ್ಚ, ವಿದ್ಯುತ್‌ವೆಚ್ಚ ಎಲ್ಲವನ್ನು ಸೇರಿಸಿದರೆ ದುಬಾರಿಯಾಗಬಹುದು. ಆದುದರಿಂದ, ಈ ಪ್ರಸ್ತಾವನೆಯನ್ನು ಮುಂದಿನ ವರ್ಷಗಳಲ್ಲಿ ಅಳವಡಿಸಿಕೊಳ್ಳಬಹುದಾಗಿದೆ ಎಂದು ಅವರ ಅಭಿಪ್ರಾಯವನ್ನು ತಿಳಿಸಿದರು.

ಕ್ರೀಡಾ ಕಟ್ಟಡದ ಬದಲು ಹೆಣ್ಣು ಮಕ್ಕಳಿಗೆ ಒಂದು ಮತ್ತು ಗಂಡು ಮಕ್ಕಳಿಗೆ ಒಂದು ಎಂದು 2 ವಿದ್ಯಾರ್ಥಿ ನಿಲಯಗಳನ್ನು ನಿರ್ಮಿಸಲು ಯೋಚಿಸಬಹುದು. ಇದು ವಿದ್ಯಾರ್ಥಿಗಳಿಗೆ ಅನುಕೂಲವಾಗುತ್ತದೆ. 25,000 Sq.ft ನಲ್ಲಿ ವಿದ್ಯಾರ್ಥಿ ನಿಲಯವನ್ನು ಅಳವಡಿಸಿ ಕೊಳ್ಳಬಹುದಾಗಿರುತ್ತದೆ. ಪ್ರತಿಯೊಂದು ರೂಪಾಯಿಯು ಬೆಲೆಯುಳ್ಳದ್ದಾಗಿದೆ. ವ್ಯರ್ಥವಾಗಿ ಪೋಲು ಮಾಡುವುದು ಸರಿಯಲ್ಲವೆಂದು ಅಭಿಪ್ರಾಯ ಪಟ್ಟರು. ಕ್ರೀಡಾ ಕಟ್ಟಡವನ್ನು ನಿರ್ಮಿಸುವ ಬಗ್ಗೆ 3–4 ವರ್ಷಗಳ ನಂತರದಲ್ಲಿ ಯೋಚಿಸಬಹುದು ಎಂದು ತಿಳಿಸಿದರು.

ಮಾನ್ಯ ಸದಸ್ಯರಾದ ಡಾ. ಹೆಚ್ ಟಿ ಅರವಿಂದ್ ರವರು Chief Engineer, Chief Architect,ಇನ್ನು ಮುಂತಾದ ಗಣ್ಯ ವ್ಯಕ್ತಿಗಳು ಮಾಸ್ಟರ್ Plan ಅನ್ನು ತಯಾರಿಸಿ ಕೊಟ್ಟಿದ್ದಾರೆ ಅವರುಗಳು ಸಹ ಜವಾಬ್ದಾರಿಯುತ ಹುದ್ದೆಗಳಲ್ಲಿ ಇರುವವರೆ ಆಗಿರುವುದರಿಂದ ಈ ಪ್ರಸ್ತಾವನೆಯ ಮೇಲೆ ಅವರ ಜವಬ್ದಾರಿ ಇರುತ್ತದೆ ಎಂದು ಅಭಿಪ್ರಾಯ ಪಟ್ಟರು.

ಮಾನ್ಯ ಸದಸ್ಯರಾದ ಡಾ. ಆರ್. ಕೆ. ಚಂದ್ರನಾಥ್ ರವರು ಯುಜಿಸಿರವರು ಕ್ರೀಡೆಯನ್ನು ಸಹ ಎಲ್ಲಾ ವಿಷಯಗಳೊಂದಿಗೆ ಸಮ ಎಂದು ಘೋಷಿಸಿದ್ದಾರೆ. ಆದುದರಿಂದ ಎಲ್ಲಾ ವಿದ್ಯಾರ್ಹತೆಗಳೊಂದಿಗೆ ಕ್ರೀಡೆಯನ್ನು ಸಮವಾಗಿ ಭಾವಿಸಬೇಕಾಗಿರುತ್ತದೆ ಎಂದು ಅಭಿಪ್ರಾಯ ಪಟ್ಟರು.

ಮಾನ್ಯ ಸದಸ್ಯರಾದ ಶ್ರೀ ಕರಣ್ ಕುಮಾರ್ ರವರು ಕಡಿಮೆ ಎಂದರೂ ಎಸ್.ಆರ್.ಗಿಂತ 3 ಪಟ್ಟು ಹೆಚ್ಚಳ ಕಂಡು ಬರುತ್ತಿದೆ. ವಿಶ್ವವಿದ್ಯಾನಿಲಯ ಮೋಸಕ್ಕೆ ಒಳಪಡಬಾರದು, ವಿದ್ಯಾರ್ಥಿಗಳ ಹಣಕ್ಕೆ ದಕ್ಕೆ ಬರಬಾರದು ಎಂದು ತಿಳಿಸಿದರು.

ವಿಶ್ವವಿದ್ಯಾನಿಲಯಕ್ಕೆ ಬರುವ ಅತಿಥಿಗಳಿಗೆ ಎಂದು ಒಂದು ಅತಿಥಿ ಗೃಹವನ್ನು ನಿರ್ಮಾಣಮಾಡಲು ಯೋಜನೆಯನ್ನು ಮಾಡಬೇಕು 4 floor, 5000 sq.ft. ಇದಕ್ಕೆ ಸುಮಾರು ರೂ.75.00 ಲಕ್ಷ ಅಥವ ರೂ, 1.00 ಕೋಟಿಗಳಲ್ಲಿ ಸುಸಜ್ಜಿತ ಅತಿಥಿ ಗೃಹವನ್ನು ನಿರ್ಮಿಸಬಹುದು ಎಂದು ತಿಳಿಸಿದರು. ವಿದ್ಯಾರ್ಥಿ ನಿಲಯ ಹುಡುಗರಿಗೆ/ಹುಡುಗಿಯರಿಗೆ –250 ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ 100 ಚದುರ ಅಡಿ ಅಥವ 120 ಚದುರ ಅಡಿಗಳಂತೆ 25.000 ಚದುರ ಅಡಿಗಳಲ್ಲಿ ಕಟ್ಟಡ ನಿರ್ಮಾಣ ಮಾಡಲು ಯೋಚಿಸಬಹುದು. ವಿದ್ಯಾರ್ಥಿಗಳಿಗೆ ಸಿವಿಲ್ ಕೋರ್ಟ್ ಬಳಿ ಇರುವ ಸ್ಥಳದಲ್ಲಿ ಮತ್ತು ವಿದ್ಯಾರ್ಥಿನಿಯರಿಗೆ ಜನರಲ್ ವಿದ್ಯಾರ್ಥಿನಿಲಯ ಇರುವ ಸ್ಥಳದಲ್ಲಿ ನೂತನ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಬಹುದಾಗಿದೆ ಎಂದು ಅಭಿಪ್ರಾಯ ಪಟ್ಟರು.

ಅವರ ಮಾತನ್ನು ಮುಗಿಸುವ ಮುನ್ನ ಮತ್ತೊಮ್ಮೆ ಅವರು ಸಭೆಯಲ್ಲಿ ಈಗಾಗಲೇ ತಿಳಿಸಿರುವಂತೆ ವಾಣಿಜ್ಯ ಕಟ್ಟಡವನ್ನು ಕೆಡವದಂತೆ, ಶೈಕ್ಷಣಿಕ ಕಟ್ಟದ ಪ್ರತಿ ಮಹಡಿಗೆ ನಿಗದಿ ಪಡಿಸಿರುವ ಅಂದಾಜು ವೆಚ್ಚ ದುಪ್ಪಟವಾಗಿದ್ದು ಈ ವೆಚ್ಚವನ್ನು ನೀಡಲು ಸಾದ್ಯವಿಲ್ಲವೆಂದು ತಿಳಿಸುತ್ತಾ ಕ್ರೀಡಾ ವಿಭಾಗಕ್ಕೆ ಮೀಸಲಿಟ್ಟಿರುವ ರೂ, 25.00 ಕೋಟಿ ಹಣವನ್ನು

ಎಫ್.ಡಿ ಮಾಡಿ ಅದರಲ್ಲಿ ಬರುವ ಬಡ್ಡಿದರದಲ್ಲಿ ವಿದ್ಯಾರ್ಥಿಗಳಿಗೆ ಮರುಪಾವತಿ ಮಾಡಲು ಯೋಚಿಸುವ ಬಗ್ಗೆ ಅವರ ವಿನಂತಿ ಎಂದು ತಿಳಿಸಿ ಇದನ್ನು ಒಪ್ಪಿಕೊಳ್ಳಲು ಸಭೆಯನ್ನು ಕೋರಿಕೊಂಡರು.

ಮಾನ್ಯ ಸದಸ್ಯರಾದ ಶ್ರೀ ಹೆಚ್ ಎನ್ ಹರಿಪ್ರಸಾದ ರವರು ಕರ್ನಾಟಕ ಸರ್ಕಾರದ ನಡಾವಳಿ ದಿನಾಂಕ 16.06.2020ನ್ನು ಓದಿ ಹೇಳಿದರು ಮುಂದುವರೆದು detailed plan copy ಕಛೇರಿಯಲ್ಲಿದೆ ಅದನ್ನು ವೀಕ್ಷಿಸಬಹುದು ಮತ್ತು ಇಂಜಿನಿಯರ್ ಬಳಿ ಮಾಹಿತಿ ಪಡೆಯಬಹುದು. ಈ ಹಂತದಲ್ಲಿ ಹಿಂದಕ್ಕೆ ಹೋಗಲು ಸಾಧ್ಯವಿಲ್ಲ ಮಾಸ್ಟರ್‌ಪ್ಲಾನ್ ಮಾಡಿ ತಿದ್ದುಪಡಿ ಮಾಡಬಹುದು ಮಾಸ್ಟರ್‌ಪ್ಲಾನ್ ಬಗ್ಗೆ ಸ್ಪಷ್ಟೀಕರಣವನ್ನು ತಾಂತ್ರಿಕ ತಜ್ಞರೇ ನೀಡಬೇಕು. ಮತ್ತು ದಿನಗಳು ಮುಂದಕ್ಕೆ ಹೋದಂತ್ತಲ್ಲ ಬಜೆಟ್ ಜಾಸ್ತಿಯಾಗುತ್ತದೆ ಎಂದು ಅಭಿಪ್ರಾಯ ಪಟ್ಟರು.

ಮಾನ್ಯ ಸದಸ್ಯರಾದ ಶ್ರೀ ಹೆಚ್. ಆರ್. ಸತೀಶ್ ರವರು ಮಾತನಾಡುತ್ತ Academic block 1,16,900 Sq feet built up area with ರೂ. 32.00 ಕೋಟಿ ಇದರಲ್ಲಿ ಎಲ್ಲಾ ಅಂಶಗಳು ಒಳಗೊಂಡಿದೆ Carpet area, Indiviual rooms, Electricity, Water, Furnishing Etc.., ಎಂದು ತಿಳಿಸಿದರು.

ಮುಂದುವರೆದು ರಿಪೇರಿ ಕೆಲಸಗಳನ್ನು ಜರೂರಾಗಿ ಮಾಡಬೇಕಾಗಿರುತ್ತದೆ. ಅವರು ಸುಮಾರು ಬಾರಿ ಈ ಬಗ್ಗೆ ಎಚ್ಚರಿಸಿರುವುದಾಗಿ ತಿಳಿಸಿ, ಮಳೆ ಶುರುವಾದರೆ ಮತ್ತೆ ಸೋರಲು ಆರಂಭಿಸುತ್ತದೆ. ಈಗ ಇರುವ Tiles ನ್ನು ತೆಗೆದ ತಕ್ಷಣ ನೇರವಾಗಿ ಸೋರಲು ಶುರುವಾಗುತ್ತದೆ. ರಿಪೇರಿ ಮಾಡಿ Water Proofing ಮಾಡಿ ಕಟ್ಟಡವನ್ನು Strengthen ಮಾಡಬೇಕು Curing ಗೆ ಸುಮಾರು 45 ದಿನಗಳಿಂದ 60 ದಿನಗಳು ಬೇಕಾಗುತ್ತದೆ ಅಷ್ಟರಲ್ಲಿ ಮಳೆ ಶುರುವಾದರೆ ಕಟ್ಟಡ ಮತ್ತಷ್ಟು ಕ್ಷೀಣಿಸುತ್ತದೆ ಎಂದು ಅಭಿಪ್ರಾಯ ಪಟ್ಟರು.

ಮಾನ್ಯ ಸದಸ್ಯರಾದ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ ನವರು Works Committee ನಲ್ಲಿ ನಿರ್ಣಯದಂತೆ ಇದನ್ನು ಒಪ್ಪಬಹುದೆಂದು ತಿಳಿಸಿದರು.

**ನಿರ್ಣಯ: ಸುಧೀರ್ಘ ಚರ್ಚೆಯ ನಂತರ ನಿರ್ಮಾಣ ಹಂತದಲ್ಲಿ ಬರಬಹುದಾದ ಸಲಹೆಗಳು ಅಥವಾ ಬದಲಾವಣೆಯ ಮಾರ್ಪಾಡುಗಳಿಗೆ ಅವಕಾಶವಿರಬೇಕೆಂಬ ಷರತ್ತಿನೊಂದಿಗೆ ಸರ್ಕಾರದ ಆರೋಗ್ಯ ಮತ್ತು ಕುಟುಂಬ** ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ವಿಭಾಗವು ಸಿದ್ದಪಡಿಸಿರುವ ವಿಸ್ತೃತಾ ಯೋಜನೆಯ ಕಾಮಗಾರಿಗಳನ್ನು ಸರ್ಕಾರ ಸೂಚಿಸುವ ಸಂಸ್ಥೆಗೆ ವಹಿಸಲು ಮತ್ತು ಕಾಮಗಾರಿಗಳನ್ನು ಕೈಗೊಳ್ಳಲು ಹಂತ ಹಂತವಾಗಿ ಹಣವನ್ನು ವರ್ಗಾಯಿಸಲು ಸಭೆಯು ಬಹುಮತದಿಂದ ನಿರ್ಣಯಿಸಿತು. ಈ ನಿರ್ಣಯಕ್ಕೆ ಶ್ರೀ. ಕರಣ್ ಕುಮಾರ್, ಶ್ರೀಮತಿ. ಜ್ಯೋತಿ ವಿಜಯ್ ಮತ್ತು ಪ್ರೊ. ಗಾಯತ್ರಿ ಇವರುಗಳು ಅಸಮ್ಮತಿಯನ್ನು ಸೂಚಿಸಿದರು. ನಿರ್ಣಯವನ್ನು ಮತದಾನಕ್ಕೆ ಹಾಕಿದಾಗ ನಿರ್ಣಯದ ಪರವಾಗಿ 12 ಸದಸ್ಯರು ಮತ್ತು ವಿರುದ್ಧವಾಗಿ 3 ಸದಸ್ಯರು ಧ್ವನಿಮತದಲ್ಲಿ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು. (1) ಶ್ರೀ ಕರಣ್ ಕುಮಾರ್ (2) ಶ್ರೀಮತಿ ಜ್ಯೋತಿ ವಿಜಯ್ ಮತ್ತು (3) ಪ್ರೊ. ವಿ. ಗಾಯತ್ರಿರವರುಗಳು ಒಪ್ಪಿರುವುದಿಲ್ಲ.

ಈ ನಿರ್ಣಯದ ನಂತರ ಸದಸ್ಯರಾದ ಶ್ರೀ ಕರಣ್ ಕುಮಾರ್ ಮತ್ತು ಶ್ರೀಮತಿ ಜ್ಯೋತಿ ವಿಜಯ್ ರವರು, ಮುಂದಿನ ವಿಷಯಗಳ ಚರ್ಚೆಯಲ್ಲಿ ಭಾಗವಹಿಸುವುದಿಲ್ಲವೆಂದು ತಿಳಿಸಿ ಸಭೆಯಿಂದ ಹೊರಗೆ ಹೋದರು ಮತ್ತು ಮುಂದಿನ ನಿರ್ಣಯಗಳಿಗೆ ಅವರುಗಳ ಹಾಜರಾತಿ ಇಲ್ಲ ಎಂದು ನಮೂದಿಸಿಕೊಳ್ಳಲು ತಿಳಿಸಿದರು.

ಈ ಹಂತದಲ್ಲಿ ಸಭಾಧ್ಯಕ್ಷರು ಮಾತನಾಡುತ್ತಾ ಉಳಿದ ವಿಷಯಗಳ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಳ್ಳಲು ಸಭೆಗೆ ಕೋರಿದರು.

**ವಿಷಯ ಸಂಖ್ಯೆ-1: 43 ನೇ ಭಾರತೀಯ ಸಮಾಜ ವಿಜ್ಞಾನ ಕಾಂಗ್ರೆಸ್ ವಿಚಾರಣಾ ಸಮಿತಿ ಅವಧಿಯನ್ನು ಏಪ್ರಿಲ್ 2021 ರ ವರೆಗೆ ವಿಸ್ತರಿಸುವ ಬಗೆಗೆ.**

ಮಾನ್ಯ ಸಭಾಧ್ಯಕ್ಷರು 43 ನೇ ಭಾರತೀಯ ಸಮಾಜ ವಿಜ್ಞಾನ ಕಾಂಗ್ರೆಸ್ ವಿಚಾರಣಾ ಸಮಿತಿಯ ಅಧ್ಯಕ್ಷರು ವರದಿಯನ್ನು ಸಲ್ಲಸಲು ಕಾಲಾವಕಾಶ ಬೇಕಾಗಿರುವುದರಿಂದ ಸಮಿತಿಯ ಅವಧಿಯನ್ನು ಏಪ್ರಿಲ್ ತಿಂಗಳವರೆಗೂ ವಿಸ್ತರಿಸಲು ಕೋರಿದ್ದಾರೆ. ಈ ವಿಷಯವನ್ನು ಈ ಸಭೆಯ ಪರಿಗಣನೆಗಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು.

**ನಿರ್ಣಯ: ಏಪ್ರಿಲ್ 30, 2021 ರ ವರೆಗೂ ಕಾಲಾವಕಾಶವನ್ನು ಈ ಸಮಿತಿಗೆ ವಿಸ್ತರಿಸಲು ಮತ್ತು ಇದೇ ಕೊನೆಯ ಕಾಲಾವಕಾಶ ವಿಸ್ತರಣೆ ಎಂದು ಸಭೆಯು ಸರ್ವಾನುಮತದಿಂದ ಅಂಗೀಕರಿಸಿತು.**

**ವಿಷಯ ಸಂಖ್ಯೆ-2: ದಿನಾಂಕ 16.03.2021 ರಂದು ಬೆಂಗಳೂರು ನಗರ ವಿಶ್ವವಿದ್ಯಾನಿಲಯದ 6ನೇ ಕೇಂದ್ರ ಖರೀದಿ ಸಮಿತಿಯ ಸಭೆ 2020-21ನೇ ಸಾಲಿನ ಸಭಾ ನಡಾವಳಿಗಳನ್ನು ಅನುಮೋದಿಸುವ ಕುರಿತು**

**ವಿಷಯ ಸಂಖ್ಯೆ: I ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಎಲ್ಲಾ ವಿಭಾಗಗಳಿಗೂ All in one ಗಣಕ ಯಂತ್ರಗಳನ್ನು GEM Portal ಮೂಲಕ ಖರೀದಿಸುವ ಬಗ್ಗೆ.**

ಕುಲಸಚಿವರು ದಿನಾಂಕ 16.06.2020 ರಂದು ನಡೆದ ಅಸಮಾನ್ಯ ಸಿಂಡಿಕೇಟ್ ಸಭೆಯಲ್ಲಿ 175 ಗಣಕ ಯಂತ್ರಗಳನ್ನು ಖರೀದಿಸಲು ಅಂಗೀಕಾರವಾಗಿರುತ್ತದೆ. ವಿಶ್ವವಿದ್ಯಾನಿಲಯಕ್ಕೆ ಅವಶ್ಯವಿರುವ 175 ಗಣಕ ಯಂತ್ರಗಳನ್ನು GEM Portal ಮುಖಾಂತರ ಖರೀದಿಸಲು ಈ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು. ಮಾರ್ಚ್ 30ರ ಒಳಗೆ ಬಜೆಟ್ ಅನ್ನು ಉಪಯಯೋಗಿಸದಿದ್ದರೆ ನಂತರ ಉಪಯೋಗಿಸಿಕೊಳ್ಳಲು ಅವಕಾಶವಿರುವುದಿಲ್ಲ ಆದುದರಿಂದ ಈ ವಿಷಯವನ್ನು ತ್ವರಿತ ಎಂದು ಪರಿಗಣಿಸಿ ಅನುಮೋದಿಸಲು ಸಭೆಗೆ ತಿಳಿಸಿದರು.

**ಸಿಂಡಿಕೇಟ್ ನಿರ್ಣಯ: ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ 175 ಗಣಕ ಯಂತ್ರಗಳನ್ನು GEM Portal** ಮುಖಾಂತರ ಖರೀದಿಸಲು ಒಪ್ಪಲಾಯಿತು.

**ವಿಷಯ ಸಂಖ್ಯೆ: II ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ ಹಾಗೂ ಗಣಿತ ವಿಭಾಗಗಳಿಗೆ ಗಣಕ ಯಂತ್ರಗಳು ಹಾಗೂ Interactive Board ಗಳನ್ನು 4(g) ವಿನಾಯಿತಿ ಪಡೆದಿರುವ ಸಂಸ್ಥೆಯಿಂದ (KEONICS) ಖರೀದಿಸುವ ಬಗ್ಗೆ.**

ಕುಲಸಚಿವರು ಮಾತನಾಡುತ್ತ ಈ ವಿಷಯಕ್ಕೆ ಸಂಬಂಧಿಸಿದಂತೆ KTTP Act ಪ್ರಕಾರ 4ಜಿ ವಿನಾಯಿತಿ ಪಡೆದಿರುವ ಟೆಂಡರು ದಾರರಿಂದ ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗಕ್ಕೆ ಹಾಗೂ ಗಣಿತ ವಿಭಾಗಗಳಿಗೆ ಗಣಕ ಯಂತ್ರಗಳು ಮತ್ತು Interactive Board ಅನ್ನು ಖರೀದಿ ಸಮಿತಿಯು ಅನುಮೋದಿಸಿದೆ ಅದರಂತೆ ವಿಷಯವನ್ನು ಸಿಂಡಿಕೇಟ್ ಸಭೆಯ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು.

ಸಿಂಡಿಕೇಟ್ ನಿರ್ಣಯ: ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ 4ಜಿ ವಿನಾಯಿತಿ ಇರುವ ಖರೀದಿದಾರರಿಂದ ಪ್ರಸ್ತಾಪನೆಯಲ್ಲಿರುವ ಗಣಕ ಯಂತ್ರವನ್ನು ಮತ್ತು **Interactive Board** ನ್ನು ಖರೀದಿಸಲು ಅನುಮತಿಸಿತು.

ವಿಷಯ ಸಂಖ್ಯೆ: **III 2020-21** ನೇ ಸಾಲಿನಲ್ಲಿ ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ಹಂಚಿಕೆಯಾಗಿರುವ **SCSP/TSP** ಯೋಜನೆಯಡಿ ಬಿಡುಗಡೆಯಾಗಿ, ಖರ್ಚಾಗಿ ಉಳಿದಿರುವ ಅನುದಾನವನ್ನು ಸರ್ಕಾರದ ಅನುಮತಿ ಮೇರೆಗೆ ಹೊಸ ಕಾರ್ಯಕ್ರಮವಾದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಪ್ರಥಮ ವರ್ಷದ ಸ್ನಾತಕೋತ್ತರ ವಿಭಾಗದ ವಿದ್ಯಾರ್ಥಿಗಳು ಹಾಗೂ **Ph.D** ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್ ಗಳನ್ನು **Gem Portal** ಮೂಲಕ ಖರೀದಿಸುವ ಬಗ್ಗೆ.

ಕುಲಸಚಿವರು ಮಾತನಾಡುತ್ತ ಈಗಾಗಲೆ ಕೇಂದ್ರ ಖರೀದಿ ಸಮಿತಿಯಲ್ಲಿ ಅನುಮೋದಿಸಿರುವಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ GEM Portal ಮುಖಾಂತರ Laptop ಗಳನ್ನು ಖರೀದಿಸುವ ಬಗ್ಗೆ ಸಿಂಡಿಕೇಟ್ ಅನುಮೋದನೆಗಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು.

ಸಿಂಡಿಕೇಟ್ ನಿರ್ಣಯ: **GEM Portal** ಮುಖಾಂತರ **Laptop** ಗಳನ್ನು ಖರೀದಿಸಲು ಸಿಂಡಿಕೇಟ್ ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

ವಿಷಯ ಸಂಖ್ಯೆ: **IV** ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ **House Keeping** ಸೇವೆಯನ್ನು ಪಡೆಯುವ ಕುರಿತು, ವಹಿಸುವ ಬಗ್ಗೆ.

**"Deferred"**

ವಿಷಯ ಸಂಖ್ಯೆ: **V** ಬೆಂಗಳೂರು ನಗರ ವಿಶ್ವವಿದ್ಯಾನಿಲಯದಲ್ಲಿ **2020-21** ರ ಶೈಕ್ಷಣಿಕ ವರ್ಷದ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳನ್ನು ಪಡೆದುಕೊಳ್ಳುವ ಸಂಬಂಧ ಈ ಹಿಂದೆ ಸಿಪಿಸಿ ಮತ್ತು ಸಿಂಡಿಕೇಟ್‌ನಲ್ಲಿನ ನಿರ್ಣಯದಂತೆ ಟೆಂಡರ್ ಮೂಲಕ ಖರೀದಿಸುವ ಬದಲು ಕರ್ನಾಟಕ ಸರ್ಕಾರದ **MSIL** ಸಂಸ್ಥೆಯಿಂದ ಖರೀದಿಸುವ ಕುರಿತು

**"Deferred"**

ವಿಷಯ ಸಂಖ್ಯೆ-VI 5 KVA ಸಾಮರ್ಥ್ಯದ 03 ಸಂಖ್ಯೆ ಹಾಗೂ 10 KVA ಸಾಮರ್ಥ್ಯದ 03 ಸಂಖ್ಯೆಯ ಯುಪಿಎಸ್‌ಗಳನ್ನು 4(ಜಿ) ವಿನಾಯಿತಿ ಹೊಂದಿರುವ M/s. KEONICS ಸಂಸ್ಥೆಯಿಂದ ಖರೀದಿಸುವ ಬಗ್ಗೆ.

ಮಾನ್ಯ ಕುಲಸಚಿವರು ಮಾತನಾಡುತ್ತ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಕುಲಪತಿಗಳ ಕಛೇರಿ, ಗ್ರಂಥಾಲಯ ವಿಭಾಗ ಹಾಗೂ ಭೌತಶಾಸ್ತ್ರ ವಿಭಾಗಳಿಗೆ ತಲಾ ಒಂದೊಂದು 5 ಕೆವಿಎ ಸಾಮಾರ್ಥ್ಯದ ಯುಪಿಎಸ್‌ಗಳನ್ನು ಹಾಗೂ ಸಂವಹನ ವಿಭಾಗ, ವಾಣಿಜ್ಯ ವಿಭಾಗ ಹಾಗೂ ರಸಾಯನ ಶಾಸ್ತ್ರ ವಿಭಾಗಳಿಗೆ ತಲಾ ಒಂದೊಂದು 10 ಕೆವಿಎ ಸಾಮಾರ್ಥ್ಯದ ಯುಪಿಎಸ್ 4(ಜಿ) ವಿನಾಯಿತಿ ಹೊಂದಿರುವ ಮೆ. ಕಿಯೋನಿಕ್ಸ್

ಸಂಸ್ಥೆಯಿಂದ ಖರೀದಿಸಲು ಕೇಂದ್ರ ಖರೀದಿ ಸಮಿತಿ ಅನುಮೋದಿಸಿದೆ ಅದರಂತೆ ಸಿಂಡಿಕೇಟ್ ಸಭೆಯ ಪರಿಗಣನೆಗಾಗಿ ಮಂಡಿಸಲಾಗಿದೆ ಎಂದು ತಿಳಿಸಿದರು.

**ಸಿಂಡಿಕೇಟ್ ನಿರ್ಣಯ: ಸಭೆಯು ಸರ್ವಾನುಮತದಿಂದ 5 ಮತ್ತು 10 ಕೆ.ವಿ.ಎ ಸಾಮಾರ್ಥ್ಯದ ಯುಪಿಎಸ್‌ನ್ನು 4(ಜಿ) ವಿನಾಯಿತಿ ಇರುವ ಕೇಂದ್ರದಿಂದ ಖರೀದಿಸಲು ಒಪ್ಪಲಾಯಿತು.**

**ವಿಷಯ ಸಂಖ್ಯೆ– 03: ಶ್ರೀ ಶಿವಶಂಕರ ಭೈರವ ಸಹಾಯಕ, ಪರೀಕ್ಷಾ ವಿಭಾಗ ಅವರ ಸೇವೆಯನ್ನು ವಜಾಗೊಳಿಸುವ ಬಗ್ಗೆ.**

**"Deferred"**

**ವಿಷಯ ಸಂಖ್ಯೆ–04: ವಿಶ್ವವಿದ್ಯಾನಿಲಯದಲ್ಲಿ ಪ್ರಸಾರಾಂಗ ವಿಭಾಗಕ್ಕೆ ಸಂಯೋಜಕರ ನೇಮಕಾತಿ ಬಗ್ಗೆ.**

**"Deferred"**

**ವಿಷಯ ಸಂಖ್ಯೆ–5: ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ತಾತ್ಕಾಲಿಕವಾಗಿ ಸಂಚಿತ ಸಂಭಾವನೆಯಲ್ಲಿ ಸೇವೆ ಪಡೆಯುತ್ತಿರುವ ಸೇವೆ ಪಡೆಯುತ್ತಿರುವ ನೌಕರರ ಸಂಭಾವನೆ ಹೆಚ್ಚಳದ ಬಗ್ಗೆ.**

ಮಾನ್ಯ ಕುಲಸಚಿವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ವಿಶ್ವವಿದ್ಯಾನಿಲಯದಲ್ಲಿ ಪ್ರಸ್ತುತ ತಾತ್ಕಾಲಿಕವಾಗಿ ಸಂಚಿತ ಸಂಭಾವನೆಯಲ್ಲಿ ಸೇವೆ ಪಡೆಯುತ್ತಿರುವ ನೌಕರರ ಸಂಭಾವನೆ ಹೆಚ್ಚಳದ ಬಗ್ಗೆ ವಿಷಯವನ್ನು ಮಂಡಿಸಲಾಗಿದೆ ಎಂದು ತಿಳಿಸಿದರು.

ಮಾನ್ಯ ಸಭಾಧ್ಯಕ್ಷರು ಹೊರಗುತ್ತಿಗೆ ನೌಕರರು 3 ವರ್ಷಗಳಿಂದ ಈ ವಿಶ್ವವಿದ್ಯಾನಿಲಯದಲ್ಲಿ ಕೆಲಸ ನಿರ್ವಹಿಸುತ್ತಿರುವುದಾಗಿ ತಿಳಿಸಿ ಅವರಿಗೆ ಕೆಲಸಕ್ಕೆ ಸೇರಿದ ದಿನದಿಂದ ಇಲ್ಲಿಯವರೆವಿಗೂ ಅದೇ ಸಂಭಾವನೆಯನ್ನು ನೀಡಲಾಗುತ್ತಿದೆ. ಹೆಚ್ಚುವರಿ ಸಂಭಾವನೆಯನ್ನು ಮಾಡಿರುವುದಿಲ್ಲ. DEO -7, Junior Assistant-26, Library Assitant-1, Lab Assistant-4, Eletrician-1, Driver-3, Group D-11 ಮತ್ತು Gardeners-6 ಒಟ್ಟು ಈಗ ಕೆಲಸ ನಿರ್ವಹಿಸುತ್ತಿರುವ 59 ನೌಕರರಿಗೂ ರೂ. 3,000/- ಗಳ ಹೆಚ್ಚಳವನ್ನು ಮಾಡಲು ಪ್ರಸ್ತಾವನೆಯನ್ನು ಮಂಡಿಸಲಾಗಿದೆ ಎಂದರು.

ಮಾನ್ಯ ಕುಲಸಚಿವರು ಮಾತನಾಡುತ್ತ ಪರಾಮಾರ್ಶಿಕ ಟಿಪ್ಪಣಿಯಲ್ಲಿ "ಎ" ಎಂದು ತೋರಿಸಿರುವ ಕಡೆ ನೀಡಬೇಕಾಗಿರುವ ಸಂಭಾವನೆ ಮತ್ತು "ಬಿ"ಯಲ್ಲಿ ನೀಡುತ್ತಿರುವ ಸಂಭಾವನೆಯನ್ನು ನಮೂದಿಸಲಾಗಿದೆ, ಕನಿಷ್ಠ ವೇತನ ಪಾವತಿಸುತ್ತಿರುವುದರಿಂದ ಬೆಲೆ ಏರಿಕೆಯನ್ನು ಪರಿಗಣಿಸಿ ವಿವಿಧ ವೃಂದಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 59 ನೌಕರರಿಗೆ ಮಾಸಿಕ ವೇತನ ಹೆಚ್ಚಳ ರೂ. 3,000/– ಗಳನ್ನು ನೀಡಿದರೆ ವಾರ್ಷಿಕ ರೂ. 21.24 ಲಕ್ಷಗಳ ಹೆಚ್ಚುವರಿ ಆರ್ಥಿಕ ಹೊರೆ ವಿಶ್ವವಿದ್ಯಾನಿಲಯಕ್ಕೆ ಆಗುತ್ತದೆ ಈ ಹೆಚ್ಚಳವನ್ನು ಟೆಂಡರ್ ಪ್ರಕ್ರಿಯೆ ನಡೆದು ಕಾರ್ಯಾದೇಶ ನೀಡುವವರೆಗೆ ಮಾತ್ರ ಅನ್ವಯಿಸುತ್ತದೆ ಎಂದು ತಿಳಿಸಿ 59 ನೌಕರರಿಗೆ ರೂ. 2,000/– ಗಳನ್ನು ಮಾಸಿಕವಾಗಿ ಹೆಚ್ಚಳ ಮಾಡಬಹುದು ಎಂದು ಸೂಚಿಸಿದರು. ಕಾರಣ ರೂ. 15,000/– ರಿಂದ 17,000/–, 13,500/– ರಿಂದ 15.500/–,

10,000/- ರಿಂದ 12,000, 8,000/- ರಿಂದ 10,000 ಮತ್ತು ದಿನಾಂಕ 01.04.2021 ರಿಂದ ಈ ಸೌಲಭ್ಯವನ್ನು ವಿಸ್ತರಿಸಬಹುದು ಎಂದು ಸಭೆಗೆ ತಿಳಿಸಿದರು.

ಮಾನ್ಯ ಸದಸ್ಯರಾದ ಶ್ರೀ ಟಿ. ಹೆಚ್. ಶ್ರೀನಿವಾಸಯ್ಯ ನವರು ವಿಶ್ವವಿದ್ಯಾನಿಲಯಕ್ಕೆ ಯಾವುದಾದರೂ ಕೆಲಸದ ಮೇಲೆ ಹಾಜರಾದಾಗ, ವಿಶ್ವವಿದ್ಯಾನಿಲಯದ ಕೆಲಸ ಒತ್ತಡ. ನೌಕರರ ಕೊರತೆ, ಈಗಿರುವ ನೌಕರರ ಕೆಲಸ ಒತ್ತಡ ಕಂಡು ಬಂದಿದೆ ಆದುದರಿಂದ ರೂ. 3,000/-ಗಳನ್ನು ಹೊರಗುತ್ತಿಗೆ ನೌಕರರಿಗೆ ನೀಡಬಹುದು ಎಂದು ಅಭಿಪ್ರಾಯ ಪಟ್ಟರು.

ಮಾನ್ಯ ಸದಸ್ಯರಾದ ಶ್ರೀ ಹೆಚ್ ಎನ್ ಹರಿಪ್ರಸಾದ ರವರು ಶ್ರೇಣಿ ಇಲ್ಲದಿದ್ದರೆ ಲೆಕ್ಕ ಪರಿಶೋಧಕರ ಆಕ್ಷೇಪಣೆ ಇಲ್ಲದಿದ್ದರೆ ರೂ, 3,000/- ಗಳ ಬದಲು ರೂ, 4,000/-ಗಳನ್ನು ಹೆಚ್ಚಿಸಬಹುದು ಇದಕ್ಕೆ ಅವರ ವಿರೋಧವಿಲ್ಲ ಎಂದು ಅಭಿಪ್ರಾಯ ಪಟ್ಟರು.

**ನಿರ್ಣಯ: ಸುದೀರ್ಘ ಚರ್ಚೆಯ ನಂತರ ಪ್ರಸ್ತುತ ಸಂಚಿತ ಸಂಭಾವನೆಯಲ್ಲಿ (ಸೇವೆ ಸಲ್ಲಿಸುತ್ತಿರುವ 59) ನೌಕರರುಗಳಿಗೆ ದಿನಾಂಕ 01.04.2021 ರಿಂದ ಅನ್ವಯಿಸುವಂತೆ ರೂ, 3,000/-ಗಳ ಮಾಹೆಯಾನ ಸಂಭಾವನೆಯ ಹೆಚ್ಚಳ ಮಾಡಲು ಸರ್ವಾನುಮತದಿಂದ ಒಪ್ಪಲಾಯಿತು.**

**Table Agenda-1:** ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ-**College with Potential for Excellence Status (CPE)** ಪಡೆಯಲು ಬಿ.ಎಂ.ಎಸ್. ಮಹಿಳಾ ಕಾಲೇಜು ಬಸವನಗುಡಿ ಕಾಲೇಜು ಸಲ್ಲಿಸುವ ಅರ್ಜಿಗೆ ಹಿಂಬರಹದ ಸಹಿ ಮಾಡುವ ಬಗೆಗೆ.

ಮಾನ್ಯ ಕುಲಸಚಿವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ಬಿಎಂಎಸ್ ಮಹಿಳಾ ಕಾಲೇಜಿನವರು College with Potential for Excellence Status (CPE) ಪಡೆಯಲು ವಿಶ್ವವಿದ್ಯಾನಿಲಯದ ಧನ ಸಹಾಯ ಆಯೋಗಕ್ಕೆ ಅರ್ಜಿ ಸಲ್ಲಿಸಲು, ಬೆಂಗಳೂರು ನಗರ ವಿಶ್ವವಿದ್ಯಾನಿಲಯಕ್ಕೆ ನಿಯಮಾನುಸಾರ ಮನವಿಯನ್ನು ಸಲ್ಲಿಸಿರುತ್ತಾರೆ. ಧನ ಸಹಾಯ ಆಯೋಗದಂತೆ ವಿಶ್ವವಿದ್ಯಾನಿಲಯವು ಕುಲಪತಿಗಳು, ಕುಲಸಚಿವರನ್ನು ಒಳಗೊಂಡಂತೆ ಒಂದು ಸಮಿತಿಯನ್ನು ರಚಿಸಿ, ಬೇಟಿ ನೀಡಿ ಅರ್ಜಿಯಲ್ಲಿ ನಮೂದಿಸಿರುವ ವಿಷಯಗಳ ಬಗ್ಗೆ ಪರಿಶೀಲಿಸಿ ಅಂಕಗಳನ್ನು ನೀಡಬೇಕಾಗಿರುವ ವಿಷಯವನ್ನು ಈ ಸಭೆಗೆ ಪರಿಗಣನೆಗಾಗಿ ಮಂಡಿಸಿದೆ ಎಂದು ತಿಳಿಸಿದರು.

ನಿರ್ಣಯ: ಯುಜಿಸಿ ನಿಯಮಾವಳಿಗಳಂತೆ, ಬಿ.ಎಂ.ಎಸ್. ಮಹಿಳಾ ಕಾಲೇಜಿಗೆ- **College with Potential for Excellence Status (CPE)** ಅರ್ಜಿ ಸಲ್ಲಿಸಲು ಒಂದು ಸಮಿತಿಯನ್ನು ರಚಿಸಲು ಕುಲಪತಿಗಳಿಗೆ ಅಧಿಕಾರ ವಹಿಸಲಾಯಿತು.

**Table Agenda-2:** ವಾಣಿಜ್ಯ ವಿಭಾಗದ ಕೆಲವು ಸ್ನಾತಕ ಪದವಿಗಳಲ್ಲಿ ಯು.ಜಿ.ಸಿ ನಿಯಮಾವಳಿಗಳ ಪ್ರಕಾರ ಭಾಷಾ ಪಠ್ಯಕ್ರಮವನ್ನು ಅಳವಡಿಸದಿರುವ ಬಗ್ಗೆ

ಮಾನ್ಯ ಸಭಾಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ವಾಣಿಜ್ಯ ವಿಭಾಗದ ಅಧ್ಯಯನ ಮಂಡಳಿಯ ಅಧ್ಯಕ್ಷರು B.Com (Accounting & Finance) -3rd & 4th Semester ಸಂಬಂಧಿಸಿದಂತೆ ದಿನಾಂಕ 1.9.2020

ರಲ್ಲಿ ವಿಶ್ವವಿದ್ಯಾನಿಲಯವು ನೀಡಿರುವ ಪತ್ರಕ್ಕೆ 12.2.2021 ರಂದು ಪತ್ರವನ್ನು ನೀಡಿರುತ್ತಾರೆ ಆದರೆ ಅವರು ವಿಶ್ವವಿದ್ಯಾನಿಲಯದಲ್ಲಿ ಸೂಚಿಸಲಾಗಿದ್ದ ಕ್ರಮಗಳನ್ನು ಜರುಗಿಸಿರುವುದಿಲ್ಲ ಆದುದರಿಂದ ಮತ್ತೊಮ್ಮೆ ದಿನಾಂಕ 1.3.2021 ರಂದು ಈ ಹಿಂದೆ ನೀಡದ್ದ ಪತ್ರವನ್ನು ಸ್ವಯಂ ವೇಧ್ಯ ಎಂದು ತಿಳಿಸಿ ಅವರ ವಿವರಣೆಯನ್ನು ಕೂಡಲೇ ನೀಡಲು ಕೋರಲಾಗಿತ್ತು. ಅವರು ಈ ವಿಷಯಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿರುವುದಿಲ್ಲ ಮತ್ತು ದಿನಾಂಕ 10.3.2021 ರಂದು ಜ್ಞಾಪನ ಪತ್ರವನ್ನು ಸಿಬ್ಬಂದಿ ವರ್ಗದವರ ಮುಖಾಂತರ ಕಳುಹಿಸಿಕೊಟ್ಟಾಗ ವಿಶ್ವವಿದ್ಯಾನಿಲಯದ ಪತ್ರವನ್ನು ಸ್ವೀಕರಿಸಿರುವುದಿಲ್ಲ. ವಾಣಿಜ್ಯ ನಿಕಾಯದ ಅಧ್ಯಯನ ಮಂಡಳಿಯ ಅಧ್ಯಕ್ಷರಾಗಿ ಸಮಯಕ್ಕೆ ಸರಿಯಾಗಿ ಕಾರ್ಯ ನಿರ್ವಹಿಸದೆ ಇರುವುದು ಕಂಡು ಬಂದಿದೆ. ಅವರ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಿರುವುದಿಲ್ಲ ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ನೋಡಿದಾಗ ಇದು ತುಂಬಾ ದೊಡ್ಡ ಬೇಜವಾಬ್ದಾರಿ ಎಂದು ಭಾವಸಬಹುದಾಗಿದೆ. ಆದುದರಿಂದ ಇವರ ಮೇಲೆ ಸೂಕ್ತ ಕ್ರಮ ಜರುಗಿಸಲು ಒಂದು ಸಮಿತಿಯನ್ನು ರಚಿಸಲು ಸಭೆಯನ್ನು ಕೋರಿದರು.

**ನಿರ್ಣಯ: ಚರ್ಚೆಯ ನಂತರ ಈ ಕೆಳಕಂಡ ಸಮಿತಿಯನ್ನು ರಚಿಸಲಾಯಿತು.**

| | | |
|---|---|---|
| 1. | ಡಾ. ಆರ್. ಕೆ. ಚಂದ್ರನಾಥ್ | ಅಧ್ಯಕ್ಷರು |
| 2. | ಪ್ರೊ. ಕೆ. ರಮೇಶ್ | ಸದಸ್ಯರು |
| 3. | ಶ್ರೀ ಬಿ. ಆತ್ಮ ಹೀರೆಮಠ | ಸದಸ್ಯರು |
| 4. | ಕುಲಸಚಿವರು | ಸದಸ್ಯಕಾರ್ಯದರ್ಶಿಗಳು |

ಕುಲಸಚಿವರಿಂದ ವಂದನಾರ್ಪಣೆ ಮತ್ತು ರಾಷ್ಟ್ರ ಗೀತೆಯೊಂದಿಗೆ ಸಭೆಯು ಮುಕ್ತಾಯವಾಯಿತು.

(Signature)
ಕುಲಸಚಿವರು ಹಾಗೂ
ಸದಸ್ಯ ಕಾರ್ಯದರ್ಶಿಗಳು

(Signature)
ಕುಲಪತಿಗಳು